2

# ಸುಳ್ಳು ಬೋಧಕರ ನಿಂದನೆ

# (5-16)

ಪೇತ್ರನಂತೆ (2 ಪೇತ್ರ 3:1), ಯೂದನು ಸಹ ತನ್ನ ಶೋತ್ರುಗಳಿಗೆ ಜ್ಞಾಪಿಸುವದು ತನ್ನ ಜವಾಬ್ದಾರಿಯ ಭಾಗವಾಗಿದೆ ಎಂದು ತಿಳಿದುಕೊಂಡಿದ್ದನು. ಯೂದನಿಗೆ ಮತ್ತು ಆತನ ಓದುಗರಿಗೆ ತಿಳಿದಿರುವ "ಭಕ್ತಿಹೀನ ವ್ಯಕ್ತಿಗಳು" ಅನೈತಿಕತೆಯನ್ನು ಪ್ರತಿಪಾದಿಸುವದರ ಮೂಲಕ ದೇವಜನರನ್ನು ಭ್ರಷ್ಟರನ್ನಾಗಿಸಿದ್ದರು. ಹಿಂದೆ ದೇವರು ಅವರನ್ನು ದಂಡಿಸಿದ್ದನು; ಆತನು ತಿರುಗಿ ದಂಡಿಸಲಿಕ್ಕಿದ್ದಾನೆ. ಆತನ ಓದುಗರು ದೇವರು ತನಗೆ ಬೆನ್ನು ಹಾಕಿದವರೊಂದಿಗೆ ವ್ಯವಹರಿಸಿದ ಇತಿಹಾಸದ ಆಧಾರದ ಮೇಲೆ ತಮ್ಮ ಮನಸ್ಸುಗಳನ್ನು ನೂತನಗೊಳಿಸಬೇಕಾಗಿದೆ.

E. Earle Ellis ರವರು ಹೀಗೆ ವಾದಿಸುತ್ತಾರೆ, ಯೂದ 5-19 ಸಂಪೂರ್ಣವಾಗಿ ಸಾಂಕೇತಿಕವಾಗಿ ಯೆಹೂದ್ಯರ ಅರ್ಥೈಸುವಿಕೆಯ ತಂತ್ರವನ್ನು ಉಪಯೋಗಿಸಿ ಎಚ್ಚರಿಕೆಯಿಂದ ರಚಿಸಿದ ವಾದವಿವಾದವಾಗಿದೆ.[1] ಇಲ್ಲಿ ಸಮಾಂತರದ ಮೃತಸಮುದ್ರದ ಸುರುಳಿಗಳಿವೆ ಮತ್ತು ಇನ್ನುಳಿದ. ಯೂದನು ತನ್ನ ಓದುಗರು ಸುಳ್ಳು ಬೋಧಕರು, ತಮ್ಮ ಯಾವುದೇ ರಚನೆಗಳಿಲ್ಲದೇ, ದೇವಸೇವಕರು ಪ್ರಕಟಿಸಿದ ಪ್ರವಾದನೆಗಳನ್ನು ಬಹಳ ಮುಂಚಿತಾಗಿ ನೇರ ವೇರಿಸುತ್ತಿದ್ದಾರೆ. Ellis ರವರ ವಾದವೆಂದರೆ ನಾವು ಯೂದನು ಮಾಡಿದ ತನ್ನ ವಿರೋಧಿಗಳ ತೀರ್ವವಾದ ಖಂಡನೆಯನ್ನು ಸಂಯೋಜನೆಯಿಲ್ಲದ ಪದಗಳಂತೆ ಓದಬಾರದು.

## ಅವಿಧೇಯರಿಗೆ ದೇವರ ದಂಡನೆ (5-7)

**5ನೀವು ಸಮಸ್ತವನ್ನೂ ಮೊದಲೇ ತಿಳಿದವರಾಗಿದ್ದರೂ ನಾನು ಮುಂದಣ ಕೆಲವು ಸಂಗತಿಗಳನ್ನು ನಿಮ್ಮ ಜ್ಞಾಪಕಕ್ಕೆ ತರಬೇಕೆಂದು ಅಪೇಕ್ಷಿಸುತ್ತೇನೆ. ಅವು ಯಾವದೆಂದರೆ - ಕರ್ತನು ತನ್ನ ಪ್ರಜೆಯನ್ನು ಐಗುಪ್ತದೇಶದೊಳಗಿಂದ ಬಿಡಿಸಿದ ತರುವಾಯ ಅವರೊಳಗೆ ನಂಬದೆ ಹೋದವರನ್ನು ನಾಶಮಾಡಿದನು. 6ತಮ್ಮ ದೊರೆತನವನ್ನು ಕಾಪಾಡದೆ ತಮ್ಮ ತಕ್ಕ ವಾಸಸ್ಥಾನವನ್ನು ಬಿಟ್ಟ ದೇವದೂತರಿಗೆ ದೇವರು ನಿತ್ಯವಾದ ಬೇಡಿಗಳನ್ನು ಹಾಕು ಮಹಾದಿನದಲ್ಲಿ ಆಗುವ ದಂಡನೆಯ ತೀರ್ಪುಗಾಗಿ ಅವರನ್ನು ಕತ್ತಲೆಯೊಳಗೆ ಇಟ್ಟಿದ್ದಾನೆ. 7ಸೋದೋಮ ಗೊಮೋರ ಪಟ್ಟಣಗಳವರು ಅವುಗಳ ಸುತ್ತಮುತ್ತಣ ಪಟ್ಟಣಗಳವರೂ ಆ ದೂರರಂತೆ ನಡೆದುಕೊಂಡು ತಮ್ಮನ್ನು ಜಾರತ್ವಕ್ಕೆ ಒಪ್ಪಿಸಿಬಿಟ್ಟು ಸ್ವಭಾ ವಿರುದ್ಧವಾದ ಭೋಗವನ್ನನುಸರಿಸಿದ್ದರಿಂದ ಅವರ ನಿಮಿತ್ತವಾದ ಅಗ್ನಿಯಲ್ಲಿ ದಂಡನೆಯನ್ನು ಅನುಭವಿಸುತ್ತಾ (ದುರ್ಮಾಗಿಗಳಿಗೆ ಆಗುವ ದುರ್ಗತಿಗೆ) ಉದಾಹರಣೆಯಾಗಿ ಇಡಲ್ಪಟ್ಟಿದ್ದಾರೆ.**

**ವಚನ 5.** ಯೂದನು ದೇವರು ದಂಡನೆಯನ್ನು ನೀಡುವ ಮೂರು ಉದಾಹರಣೆಗಳೊಂದಿಗೆ ಪ್ರಾರಂಭಿಸುತ್ತಾನೆ. ಈ ಮೂರು ಉದಾಹರಣೆಗಳು ಯೂದನು ತನ್ನ ಮೊದಲ ಓದುಗರಿಗೆ ದೇವರು ಅವರ ಮಧ್ಯದಲ್ಲಿರುವ ಸುಳ್ಳು ಬೋಧಕರನ್ನು ತನ್ನ ವಿರುದ್ಧವಾಗಿ ದಂಗೆ ಎದ್ದವರನ್ನು ದಂಡಿಸಿದಂತೆ ದಂಡಿಸುತ್ತಾನೆ ಎಂಬುದನ್ನು ಜ್ಞಾಪಿಸುತ್ತಾನೆ. 5 ರಿಂದ 7ರಲ್ಲಿ ಯೂದನು ಸಂಬೋಧಿಸಿದ ವಚನಗಳಿಗೆ ಅನುಸಾರವಾಗಿ ಎರಡು ವಿಧದಲ್ಲಿ

ಬರೆಯುತ್ತಾನೆ, ಇಲ್ಲಿ 2 ಪೇತ್ರ 2:4-7ರೊಂದಿಗೆ ಸ್ಪಷ್ಟವಾದ ಸಮಾನಾಂತರಗಳಿವೆ. ಇಬ್ಬರೂ ಹಳೆ ಒಡಂಬಡಿಕೆಯ ಉದಾಹರಣೆಗಳನ್ನು ತೆಗೆದುಕೊಂಡು ಎಚ್ಚರಿಸುತ್ತಾರೆ. ಎರಡು ಉದಾಹರಣೆಗಳಲ್ಲಿ ಅವರು ಒಂದೇ ರೀತಿಯ ಉದಾಹರಣೆಗಳನ್ನು ಉಪಯೋಗಿಸುತ್ತಾರೆ, ಯೂದನ ಪುಸ್ತಕವು 2 ಪೇತ್ರನ ಪುಸ್ತಕದೊಂದಿಗೆ ವ್ಯತ್ಯಾಸವಿರುವದು ಕೇವಲ ಇಸ್ರಾಯೇಲರು ಐಗುಪ್ತವನ್ನು ಬಿಟ್ಟುಬಂದ ನಂತರ ದೇವರಿಗೆ ಅವಿಧೇಯರಾಗಿರುವ ಉದಾಹರಣೆಯನ್ನು ಉಪಯೋಗಿಸುತ್ತಾರೆ, ಯೂದನ ಪುಸ್ತರವು 2 ಪೇತ್ರನ ಪುಸ್ತಕದೊಂದಿಗೆ ವ್ಯತ್ಯಾಸವಿರುವದು ಕೇವಲ ಇಸ್ರಾಯೇಲರು ಐಗುಪ್ತವನ್ನು ಬಿಟ್ಟುಬಂದ ನಂತರ ದೇವರಿಗೆ ಅವಿಧೇಯರಾಗಿರುವ ಉದಾಹರಣೆಯನ್ನು ಉಪಯೋಗಿಸಿರುವದಾಗಿದೆ. ಪೇತ್ರನು ನೋಹನನ ಕಾಲದಲ್ಲಿ ದೇವರ ನ್ಯಾಯತೀರ್ಪನ್ನು ಅರಿಕೆಮಾಡುವದನ್ನು ಆಯ್ದುಕೊಳ್ಳುತ್ತಾನೆ. ಯೂದನು ಐಗುಪ್ತದಿಂದ ಹೊರಗೆ ಬಂದ ಅಪನಂಬಿಗಸ್ತ ಇಸ್ರಾಯೇಲರ, ದೇವದೂತರ ಮತ್ತು ಸೋದೋಮ ಗೊಮೇರಗಳ ಉದಾಹರಮೆಗಳನ್ನು ಉಪಯೋಗಿಸುತ್ತಾನೆ. ಪೇತ್ರನು ದೇವದೂತರು, ನೋಹನನ ಕಾಲದಲ್ಲಿ ಅವಿಧೇಯರಾದವರು ಮತ್ತು ಸೋದೋಮ ಗೋಮೋರಗಳ ಉದಾಹರಣೆಗಳನ್ನು ಉಪಯೋಗಿಸುತ್ತಾನೆ.

ಯೂದ ಮತ್ತು ಪೇತ್ರ ಉಪಯೋಗಿಸಿದ ಉದಾಹರಣೆಗಳು ನಿರ್ಧಿಷ್ಟವಾಗಿ ಒಂದೇ ಆಗಿಲ್ಲ. ಈ ವ್ಯತ್ಯಾಸವು ಪತ್ರಗಳ ವಿಶಿಷ್ಟತೆಯ ಕುರಿತಾಗಿ ಏನಾದರು ಹೇಳಲಿಕ್ಕಿದೆಯೋ ಇಲ್ಲವೋ ಎಂಬುದನ್ನು ನಾವು ಕೇಳಬೇಕು. ಒಂದು ವೇಳೆ ಇದು ಸತ್ಯವಾದಲ್ಲಿ, ಇದು ಹೆಚ್ಚುಕಡಿಮೆ ಖಚಿತವಾಗಿರುವಾಗ, ಲೇಖಕರಲ್ಲಿ ಒಬ್ಬರು ಇನ್ನೊಬ್ಬರ ಪತ್ರಿಕೆಗಳನ್ನು ಉಪಯೋಗಿಸಿದ್ದಾದರೆ, ನಂತರದ ಲೇಖಕನು ಒಂದು ಉದಾಹರಣೆಯನ್ನು ಇನ್ನೊಂದಕ್ಕೆ ಬದಲಿಯಾಗಿ ಉಪಯೋಗಿ ಸಬಾರದು? ಏಕೆ ಸುಮ್ಮನೆ ನಾಲ್ಕನೆಯ ಉದಾಹರಣೆಯನ್ನು ಉಪಯೋಗಿಸಬೇಕು? ಈ ಬದಲಿ ವ್ಯವಸ್ಥೆಯಲ್ಲಿ ಯಾವ ಲೇಖಕನು ಮೊದಲು ಬರೆದನು ಎಂದು ಸಲಹೆ ನೀಡುವಂತದ್ದು ಏನಾದರು ಇದೆಯೋ? ಬರೆದಿರುವ ಸಮಯ ಮತ್ತು ಶೋತ್ರುಗಳ ಕುರಿತಾಗಿ ಹೇಳುವಂತದ್ದು ಏನಾದರೂ ಇದೆಯೋ?

ನಾವು ಎಚ್ಚರವಾಗಿರಬೇಕು, ಹಾಗೂ, ಯೂದನು ಪ್ರಾಮುಖ್ಯವಾಗಿ ಯೆಹೂದಿ ಕ್ರೈಸ್ತ ಶೋತ್ರುಗಳಿಗೆ ಬರೆಯುತ್ತಿದ್ದಲ್ಲಿ, ಆತನು ಯೆಹೂದ್ಯರ ಪ್ರಾರಂಭದ ಇತಿಹಾಸದಲ್ಲಿ ನಡೆದ ಸಂಗತಿಗಳನ್ನು ತನ್ನ ಓದುಗರು ಕಲಿಯಲಿ ಎಂಬುದಾಗಿ ಬಯಸಿರಬಹುದು. ಅವನು ಅಪನಂಬಿಗಸ್ತ ಇಸ್ರಾಯೇಲರ ಉದಾಹರಣೆಯನ್ನು ಈ ಕಾರಣದಿಂದಾಗಿ ಸೇರಿಸಿರಬಹುದು. ನೋಹನನ ಕಾಲದಲ್ಲಿದ್ದ ಈ ಅವಿಧೇಯತೆ ಜಾಗತಿಕ ಮಾನವ ಕುಟುಂಬದ ಅನುಭವದಿಂದ ತೆಗೆದುಕೊಳ್ಳಲಾದ ಉದಾಹರಣೆಯಾಗಿದೆ, ಕೇವಲ ಯೆಹೂದ್ಯ ಜನಾಂಗೀಯ ಇತಿಹಾಸದಿಂದ ಮಾತ್ರವೇ ಅಲ್ಲ.

ಪೇತ್ರನು ಯೂದನ ಅಪನಂಬಿಗಸ್ತ ಇಸ್ರಾಯೇಲರ ಉದಾಹರಣೆಯನ್ನು ಬಿಟ್ಟುಬಿಟ್ಟಿರಬಹುದು ಯಾಕಂದರೆ ಯೆಹೂದ್ಯರ ಅಪರಾಧವನ್ನು ಇದರೊಳಗೆ ತೆಗೆದುಕೊಳ್ಳುವದರ ವಿಷಯದಲ್ಲಿ ಆತನು ಸೂಕ್ಷ್ಮಗ್ರಾಹಿಯಾಗಿದ್ದನು. ಆದಾಗ್ಯೂ ಕೊನೆಯಲ್ಲಿ, ಯೂದನು ಏಕೆ ಅಪನಂಬಿಗಸ್ತ ಇಸ್ರಾಯೇಲರ ಮತ್ತು ಪೇತ್ರನು ನೋಹನನ ಕಾಲದ ಅವಿಧೇಯರ ಕುರಿತಾಗಿ ಅರಿಕೆ ಮಾಡಿದನು ಎಂಬುದರ ಕುರಿತಾಗಿ ಸ್ಪಷ್ಟವಾದ ಕಾರಣಗಳಿಲ್ಲ. ಈ ಬದಲಿ ವ್ಯವಸ್ಥೆಯಿಂದ ನಮಗೆ ಯಾವುದೇ ರೀತಿಯ ಮಾರ್ಮಿಕವಾದ ಸಂದೇಶವನ್ನು ತೀರ್ಮಾನಿಸಲಾಗುವದಿಲ್ಲ. ಎರಡು ಪತ್ರಗಳನ್ನು ಬರೆದಿರುವ ಕ್ರಮದ ಕುರಿತಾಗಿ ಮತ್ತು ಅವುಗಳ ಶೋತ್ರುಗಳ ಕುರಿತಾಗಿ ಸ್ಪಷ್ಟವಾದ ಊಹೆಗಳಿಲ್ಲ. ಬದಲಿವ್ಯವಸ್ಥೆಯು ಕೆಲವು ವಿಶಿಷ್ಟತೆಯನ್ನು ಹೊಂದಿರಬಹುದಾದ ಸಂಭವವಿದೆ, ಆದರೆ ಈ ವಿಶಿಷ್ಟತೆಯು ಆಧುನಿಕ ಓದುಗರಲ್ಲಿ ಇಲ್ಲದೇ ಹೋಗಿದೆ.

ಯೂದನ ಪುಸ್ತಕ ಬಹುಶಃ **ಐಗುಪ್ತ ದೇಶದಿಂದ ಹೊರಬಂದವರು** ತಮ್ಮ ಸಾಮಾನ್ಯ

ನಡತೆಯ ದೋಷಾರೋಪಣೆಯಿಂದಾಗಿ **ನಂಬದೆ ಹೋದವರನ್ನು ನಾಶವಾದವರು** ಅಪನಂಬಿಗಸ್ತ ನಡತೆಯನ್ನು ಉಲ್ಲೇಖಿಸುತ್ತಿರಬಹುದು. ಇನ್ನೊಂದು ರೀತಿಯಲ್ಲಿ ಆತನ ಮನಸ್ಸಿನಲ್ಲಿ ವಿಶೇಷವಾದ ಸಂಗತಿಯಿರಬಹುದು, ಉದಾಹರಣೆಗೆ ಜನರು ಗೂಢಾಚಾರರಿಂದ ಕಾನಾನಾ ದೇಶದ ವರದಿಯನ್ನು ಕೇಳಿದ ನಂತರ ಗುಣುಗುಟ್ಟಿದ್ದು (ಅರಣ್ಯಕಾಂಡ 14). ಕರ್ತನಲ್ಲಿ ಅವರ ನಂಬಿಕೆಯ ಕೊರತೆಯಿಂದಾಗಿ ದೇವರು ಇಸ್ರಾಯೇಲರನ್ನು ನಲವತ್ತು ವರ್ಷಗಳ ಕಾಲ ಅಡವಿಯಲ್ಲಿ ಅಲೆಯುವದಕ್ಕೆ ಒಪ್ಪಿಸಿದನು. ಇಸ್ರಾಯೇಲರ ದಂಗೆಯ ಪರಿಣಾಮವಾಗಿ ದೇವರ ಶಿಕ್ಷೆ ಯೂದನ ಓದುಗರಿಗೆ ಒಂದು ಎಚ್ಚರಿಕೆಯಾಗಿದೆ. ಅವರು ಕ್ರಿಸ್ತನ ಆಶೀರ್ವಾದವನ್ನು ಹಗುರವಾಗಿ ಪರಿಗಣಿಸಬಾರದು. ಅವರು ಸುಳ್ಳು ಬೋಧಕರನ್ನು ಆಲಿಸುವ ದೇವಜನರು ಎಂದು ಕರೆಸಿಕೊಂಡಿದ್ದಾಗಲೂ, ದೇವರ ನ್ಯಾಯ ತೀರ್ಪನ್ನು ತಮ್ಮ ಮೇಲೆ ಬರಮಾಡಿಕೊಳ್ಳುವವರಾಗಿದ್ದಾರೆ. ಪೌಲನು ಹೆಚ್ಚುಕಡಿಮೆ ಇದೇ ಪಾಠವನ್ನು 1 ಕೊರಿಂಥ 10:6-13ರಲ್ಲಿ ಬೋಧಿಸುತ್ತಾನೆ.

ಯೂದ ಮತ್ತು ಪೇತ್ರ ಇಬ್ಬರೂ ತಮ್ಮ ಓದುಗರಿಗೆ ಅಪೊಸ್ತಲ ಬೋಧಕರು ಅವರಿಗೆ ತಂದ ಸುವಾರ್ತೆಯ ಸಂದೇಶದಿಂದ ಅವರು ಕಲೆತಿರುವ ಸಂಗತಿಗಳನ್ನು ಜ್ಞಾಪಿಸುತ್ತಿದ್ದಾರೆ (2 ಪೇತ್ರ 1:12, 13; 3:1). ಓದುಗರು ತಾವು ಮೂಲತಃ ಆಲಿಸಿರುವ ಸಂಗತಿಗಳಿಗೆ ಹಿಂತಿರುಗುವದು ಅವಶ್ಯವಾಗಿದೆ. ಅವರು ಅಪೊಸ್ತಲರ ಸಾಕ್ಷಿಯಿಂದ ಆಲಿಸಿರುವ ಮತ್ತು ಅವರು ಸುಳ್ಳು ಬೋಧಕರಿಂದ ಕಲೆತಿರುವ ಸಂಗತಿಗಳಲ್ಲಿ ಸಾಮಾನ್ಯವಾದದ್ದು ಏನೂ ಇಲ್ಲ.

ಯೂದನು ಮಾದರಿ ವಿರುದ್ಧ ಮಾದರಿ ವ್ಯಾಖ್ಯಾನವನ್ನು ಉಪಯೋಗಿಸುತ್ತಾನೆ. ಅಡವಿಯಲ್ಲಿ ಇಸ್ರಾಯೇಲರ ಮಾದರಿಯಾಗಿದೆ; ಆದರೆ ಯಾರು ವಿರುದ್ಧ ಮಾದರಿಯಾಗಿದ್ದಾರೆ? ಆತನು ಇಸ್ರಾಯೇಲರು ಅಡವಿಯಲ್ಲಿದ್ದದ್ದು ಮತ್ತು ದೇವರ ಅವರ ಮೇಲೆ ಶಿಕ್ಷೆಯನ್ನು ಬರಮಾಡಿದ್ದು ಅವನು ಸಂಬೋಧಿಸಿದ ಸಭೆಗಳಿಗೆ ತೊಂದರೆಯನ್ನು ನೀಡುತ್ತಿರುವ ಸುಳುಅಳ ಬೋಧಕರಿಗೆ ಏನಾಗುತ್ತದೆ ಎಂಬುದಕ್ಕೆ ಮಾದರಿಯಾಗಿ ಕಾರ್ಯವನ್ನು ಮಾಡುತ್ತದೆ. ಹಾಗಿದ್ದಲ್ಲಿ, ಸುಳ್ಳು ಬೋಧಕರು ನಂಬದೇ ಇರುವ ಇಸ್ರಾಯೇಲರಿಗೆ ಹೋಲಿಕೆಯಾಗಿದ್ದಾರೋ? ಹಾಗಿದ್ದಲ್ಲಿ, ಯೂದನು ಅವರು ದೇವರಿಂದ ದೂರಹೋಗುವ ಪೂರ್ವದಲ್ಲಿ, ಕ್ರೈಸ್ತ ಸಮುದಾಯದ ನಂಬಿಗಸ್ತ ಸದಸ್ಯರಾಗಿದ್ದರು. ಅವರು ತಿರುಗಿ ಹುಟ್ಟಿದವರಾಗಿದ್ದರು. ಅವರು ಕ್ರಿಸ್ತನನ್ನು ಧರಿಸಿದವರು ಮತ್ತು ದೇವರ ರಾಜ್ಯವನ್ನು ಹಂಚಿಕೊಳ್ಳುವವರು ಆಗಿದ್ದರು ಎಂದು ಯೂದನು ಸೂಚಿಸುತ್ತಾನೆ. ಇಲ್ಲಿ ಯೂದನು ತನ್ನ ಓದುಗರಿಗೆ ವಿವರಿಸಲು ಬಯಸುವ ವಿಷಯವೆಂದರೆ ಸುಳ್ಳು ಬೋಧಕರು ಅವರ ಭಾಗವಾಗಿರುವ ಸಂದರ್ಭದಲ್ಲಿ ಸತ್ಯದಿಂದ ಅವರು ವಿಮುಖರಾಗುವದು ದೇವರ ಸಾರ್ವಭೌಮ ನಿಯಮದ ವ್ಯಾಪ್ತಿಯೊಳಗಿತ್ತು. ಅವನ ರಚನೆಯಲ್ಲಿ ಭಕ್ತಿಹೀನ ಜನರು ಕ್ರೈಸ್ತರೊಳಗಿಂದಲೇ ಉದ್ಭವಿಸುತ್ತಾರೆ ಮತ್ತು ಲೋಕದ ಕಡೆಗೆ ತಿರುಗಿಕೊಳ್ಳುತ್ತಾರೆ ಎಂಬುದನ್ನು ಪ್ರಾರಂಭದಿಂದಲೇ ಆತನು ಸೇರಿಸಿದ್ದನು.

ಯೂದನು ಬರೆಯುವದಕ್ಕೆ ಹೆಚ್ಚಾದ ಕಾರಣವೆಂದರೆ ಆತನು ತನ್ನ ಓದುಗರಿಗೆ ಎಚ್ಚರಿಕೆಯನ್ನು ನೀಡಲು ಬಯಸಿದ್ದನು. ಆತನು ಅವರಿಗೆ ಅವರು ದೇವರೊಂದಿಗೆ ತಮ್ಮ ಸಂಬಂಧದಲ್ಲಿ ಸಂತೃಪ್ತರಾಗಿರಬಾರದು ಎಂದು ಹೇಳಲು ಬಯಸುತ್ತಾನೆ. ಹಿಂದೆ, ದೇವರು ಆದುಕೊಂಡ ಜನರಾದ ಇಸ್ರಾಯೇಲರು ವಿಗ್ರಹಾರಾಧನೆಗೆ ತಿರುಗಿಕೊಂಡರು, ದೇವರನ್ನು ಸಂದೇಹಿಸಿದರು, ಮತ್ತು ಅಡವಿಯಲ್ಲಿ ಅಪನಂಬಿಗಸ್ತಿಕೆಗೆ ಒಪ್ಪಿಸಿಕೊಟ್ಟರು. ಅದು ಸಂಭವಿಸುವಾಗ, ದೇವರು ಬೆಂಕಿಯ ತೀರ್ಪನ್ನು ಬರಮಾಡಿದನು. ಒಂದುವೇಳೆ ಯೂದನ ಓದುಗರು ಸುಳ್ಳುಬೋಧಕರ ಹಾದಿಯಲ್ಲಿ ನಡೆದರೆ, ಅವರಿಗೆ ಸಹ ಅದೇ ಶಿಕ್ಷೆ ಬರುತ್ತದೆ. ಯೂದನು ಜ್ಞಾಪನ ಮತ್ತು ಎಚ್ಚರಿಕೆಯನ್ನು ನೀಡುತ್ತಿರುವದರಿಂದ, ಅವನು ತನ್ನ ಓದುಗರು ಮಾದರಿ ವಿರುದ್ಧವಾದ ಇಸ್ರಾಯೇಲ್ಯರಾಗಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕೆಂದು

ಬಯಸುತ್ತಿದ್ದಾನೆ. ಅವರು ಇಸ್ರಾಯೇಲರ ಹೆಜ್ಜೆ ಜಾಡಿನಲ್ಲಿ ನಡೆಯುವ ದೃಷ್ಟಿಕೋನದಲ್ಲಿ ನಿಂತಿದ್ದಾರೆ. ಅವರು ಹಾಗೆ ಮಾಡಿದ್ದಲ್ಲಿ, ದೇವರು ತಾನು ಕರೆದವರನ್ನು "ನಂತರ ನಾಶಮಾಡಿದ ಹಾಗೆ" ಅವರ ಮೇಲೆ ಸಹ ದೇವರ ನ್ಯಾಯತೀರ್ಪು ಬರುತ್ತದೆ.

**ವಚನ 6.** ಎರಡನೆಯ ಉದಾಹರಣೆಯನ್ನು ಅರಿಕೆ ಮಾಡುತ್ತಿರುವ ಹಾಗೆ, ದೇವರು ದೇವದೂತರು ಆತನಿಗೆ ಬೆನ್ನು ತೋರಿಸುವಾಗ ತೀರ್ಪುಮಾಡುತ್ತಾನೆ ಎಂಬುದನ್ನು **ದೇವದೂತರು** ಪಾಪ ಮಾಡಿದಾಗ ಅನುಭವಿಸಿದ ದೇವರ ಕೋಪವನ್ನು ಅವರಿಗೆ ವಿವರಿಸುತ್ತಾನೆ. ಪೇತ್ರನು ಅದೇ ಉದಾಹರಣೆಯನ್ನು ಉಪಯೋಗಿಸುತ್ತಾನೆ (2 ಪೇತ್ರ 2:4), ಆದರೆ ದೇವದೂತರ ಮೇಲೆ ದೇವರ ನ್ಯಾಯ ತೀರ್ಪಿನ ವಿಷಯದಲ್ಲಿ ಯೂದನಿಗಿಂತ ಸ್ವಲ್ಪ ಹೆಚ್ಚಾಗಿ ವಿವರಿಸುತ್ತಾನೆ. ಸಹಜವಾಗಿ ಪೇತ್ರನು ಮತ್ತು ಯೂದನು ಇಬ್ಬರೂ ತಮ್ಮ ಓದುಗರು ದೇವದೂತರ ನ್ಯಾಯ ತೀರ್ಪಿನ ಕುರಿತು ಈಗಾಗಲೇ ತಿಳಿದುಕೊಂಡಿದ್ದಾರೆ ಎಂದು ನಿರೀಕ್ಷಿಸುತ್ತಾರೆ. ಇದು ಕೇವಲ ವೀಕ್ಷಣೆಯ ಸಂಗಾತಿಯಾಗಿದೆ. ಹಾಗೂ, ಇದನ್ನು ಹಳೆ ಅಥವಾ ಹೊಸ ಒಡಂಬಡಿಕೆ ದೇವರು ದೇವದೂತರಿಗೆ ನೀಡಿದ ತೀರ್ಪಿನ ಸಮಯದ ಕುರಿತು ದಾಖಲಿಸುವದಿಲ್ಲ.

ಹೊಸ ಒಡಂಬಡಿಕೆಯ ಕಾಲದ ವರೆಗೆ ಯೆಹೂದ್ಯರಲ್ಲಿ ದೇವದೂತರ ಕುರಿತು ಶ್ರೇಷ್ಟವಾದ ಕಲ್ಪನೆಯಿತ್ತು. ಇದು ಅನೇಕಾವರ್ತಿ ಆದಿಕಾಂಡ 6:1-4ರಲ್ಲಿ "ದೇವಪುತ್ರರು" "ಮನುಷ್ಯ ಪುತ್ರಿಯರ" ಬಳಿಗೆ ಹೋದ ವಿಷಯದ ಕಥೆಯ ಮೇಲೆ ಕೇಂದ್ರಿಕರಿಸಲಾಗುತಿತ್ತು. ಅವರ ಕೆಲವು ಕಲ್ಪನೆಗಳು ಹನೋಕ ಎಂಬ ಅವರ ಅಂತರಾಷ್ಟ್ರೀಯ ಕೃತಿಗಳಲ್ಲಿ ಕಂಡುಬರುತ್ತವೆ (ಆದಿಕಾಂಡ 5:21-24; ನೋಡಿರಿ). ಮೊದಲನೆಯ ಹನೋಕ ಹಂತಹಂತಕವಾಗಿ ಬರೆದ ಸಂಯುಕ್ತ ಕೃತಿಯಾಗಿದೆ. ಇದರ ಪ್ರಾರಂಭದ ಭಾಗವು ಶತಮಾನಗಳ ಹಿಂದೆ ಇರುತ್ತವೆ ಅಥವಾ ಹೊಸ ಒಡಂಬಡಿಕೆಯವರೆಗೆ ಮುಂದುವರೆಯುತ್ತದೆ. ಅದೇ ಸಮಯದಲ್ಲಿ ಇದರ ಮುಂದಿನ ಭಾಗವು ಕ್ರಿಸ್ತ ಶಕೆಯ ಮೊದಲನೆಯ ಶತಮಾನದ ಸಮಯವಾಗಿ ತೋರಿ ಬರುತ್ತದೆ. ಯೂದನ ಓದುಗರು 1 ಹನೋಕನ ಪುಸ್ತಕದ ಕುರಿತು ಪರಿಚಿತರಾಗಿದ್ದರು ಎಂಬುದು ಆತನು ತನ್ನ ಪತ್ರದಲ್ಲಿ ನಂತರ ಕೂಲಂಕುಷವಾಗಿ ಸೂಚಿಸಿರುವದರಿಂದ ಸ್ಪಷ್ಟವಾಗುತ್ತದೆ.[2]

ಯೂದನ ಪತ್ರಿಕೆ ದೇವದೂತರಿಗೆ ಆದ ನ್ಯಾಯತೀರ್ಪು ನಿಜವಾಗಿಯೂ ಸಂಭವಿಸಿದೆ ಎಂಬುದನ್ನು ತಿಳಿದುಕೊಳ್ಳಬೇಕು ಎಂದು ಉದ್ದೇಶಿಸಿರಬಹುದು. ಉತ್ತಮ ಬೋಧಕನಾಗಿ ಯೂದನು ಜನಪ್ರಿಯ ಕಥೆಗಳನ್ನು ಪುರಾಣಗಳನ್ನು ದೇವರು ತನಗೆ ಆತ್ಮೀಯರಾಗಿರುವವರಿಗೆ ಸಹ ನ್ಯಾಯತೀರ್ಪನ್ನು ನೀಡುವನು ಎಂಬ ಉದಾಹರಣೆಯ ಮೂಲಕ ಅರಿಕೆ ಮಾಡಿರಬಹುದು. ಇಲ್ಲಿ ಆತನು ತಿಳಿಸುವ ಅಂಶವೆಂದರೆ ಒಬ್ಬನು ದೇವರ ಒಳ್ಳೇತನವನ್ನು ಲಘುವಾಗಿ ತೆಗೆದುಕೊಳ್ಳುವದಾಗಲಿ ಅಥವಾ ಗ್ರಹಿತವೆಂದು ಭಾವಿಸುವದಾಗಲಿ ಈ ಘಟನೆಗಳು ನಿಜವಾಗಿ ಸಂಭವಿಸಿದವು ಎಂಬುದನ್ನು ಸೂಚಿಸುವದಿಲ್ಲ.

ಯೂದನು ಕಲ್ಪನಾ ಕಥೆಗಳ ಮೇಲೆ ಸೆಳೆಯುತ್ತಿದ್ದಾನೆ ಎಂಬ ಸಾಧ್ಯತೆಯನ್ನು ನಿರಾಕರಿಸಲು ಸಾಧ್ಯವಿಲ್ಲ. ದೇವದೂತರ ಕುರಿತಾದ ಉಲ್ಲೇಖಗಳು ಇತಿಹಾಸದಿಂದ ತೆಗೆದುಕೊಳ್ಳಲಾಗಿದೆ ಎಂಬುದು ಗಮನಿಸಲು ಯೋಗ್ಯವಾಗಿದೆ. ಯೂದನು ಸ್ವಧರ್ಮ ಭ್ರಷ್ಟರಾದ ಇಸ್ರಾಯೇಲರ ಕತೆಗಳನ್ನು ತೆಗೆದುಕೊಂಡಿರಬಹುದು ಮತ್ತು ಸೋದೋಮ ಗೊಮೋರದ ಕತೆಗಳನ್ನು ನಿಜವಾಗಿ ಸಂಭವಿಸಿದ ಘಟನೆಗಳಾಗಿ ತೆಗೆದುಕೊಂಡಿರಬಹುದು. ಆತನು ದೇವದೂತರ ನ್ಯಾಯತೀರ್ಪನ್ನು ವಿಭಿನ್ನವಾಗಿ ಯೋಚಿಸಿದನ್ನು ಎನ್ನುವದಕ್ಕೆ ಕಾರಣಗಳಿಲ್ಲ. ಮುಂದಕ್ಕೆ ಆತನು ದೇವದೂತರ ಉಲ್ಲಂಘನೆಯ ಕುರಿತು ಹೆಚ್ಚು ನಿರ್ದಿಷ್ಟವಾಗಿದ್ದಾನೆ. ಅವರು ತಮ್ಮ **ತಕ್ಕ ವಾಸಸ್ಥಾನವನ್ನು** ಇಟ್ಟುಕೊಳ್ಳಲಿಲ್ಲ. ದೇವದೂತರು ದೇವರ ಸಂದೇಶಕರಾಗಿದ್ದರು; ಅವರು ಆತನೊಂದಿಗೆ ನಿಕಟವಾಗಿದ್ದರು. ದೇವದೂತರು ದೇವರ

ಆತ್ಮೀಯ ಸಹಾಯಕರಾಗಿದ್ದರು ಎಂದರೆ ಅತಿಶಯೋಕ್ತಿಯಾಗಲಾರದು. ಚರ್ಚೆಯಲ್ಲಿರುವ ದೂತರಿಗೆ ವಿಶೇಷಾಧಿಕಾರದ ಸ್ಥಾನಗಳಿದ್ದವು ಆದಾಗ್ಯೂ ಅವರು ತಮ್ಮ **ವಾಸಸ್ಥಾನದ ಕುರಿತು ತೃಪ್ತರಾಗಿರಲಿಲ್ಲ.** ಸ್ಥಾನದ ಕುರಿತು ತೃಪ್ತರಾಗಿರಲಿಲ್ಲ. ದೇವದೂತರು ಏದೇನ್ ತೋಟದಲ್ಲಿದ್ದ ಪುರುಷ ಮತ್ತು ಸ್ತ್ರೀಯಂತಿದ್ದರು ಎಂದು ಸೂಚಿಸುತ್ತದೆ (ಆದಿಕಾಂಡ 3:5), ಅವರು ದೇವರಂತೆ ಆಗಬೇಕು ಎಂಬ ಗುರಿಯನ್ನು ಹೊಂದಿದ್ದರು. ಹೆಮ್ಮೆ ಎಂಬುದು ದೇವದೂತರ ಮತ್ತು ಮಾನವರ ಪಾಪದ ಉಗಮವಾಗಿ ತೋರಿಬರುತ್ತದೆ.

ದೇವದೂತರ ದಂಗೆ ಯಾವಾಗ ಸಂಭವಿಸಿತು? ಪರಿಸ್ಥಿತಿಗಳು ಏನಾಗಿದ್ದವು? ಎಂಬುದನ್ನು ಸತ್ಯವೇದವು ಹೇಳುವದಿಲ್ಲ. ಆದಾಗ್ಯೂ ಸತ್ಯವೇದದ ಮೌನವು ಕಲ್ಪನೆಗಳನ್ನು ನಂದಿಸಿರುವದು ವಿರಳವಾಗಿದೆ. ಸೈತಾನನು ಪಾಪ ಮಾಡಿದ ದೇವದೂತರಲ್ಲಿ ಒಬ್ಬನಾಗಿದ್ದನು, ನಿಜವಾಗಿಯೂ ಅವರ ನಾಯಕನಾಗಿದ್ದನು ಎಂಬುದು ಸಾಂಪ್ರದಾಯಿಕವಾದ ಸಿದ್ಧಾಂತವಾಗಿದೆ. ಯೂದನಾಗಲಿ ಅಥವಾ ಸತ್ಯವೇದದಲ್ಲಿ ಬೇರೆ ಕಡೆಯಲ್ಲಾಗಲಿ ಸೈತಾನನ ಮೂಲಕ ಕುರಿತು ಬೋಧನೆಯಿಲ್ಲ. ಬಹುಶಃ ಈತನು ತನ್ನ "ಸ್ವಂತ ವಾಸಸ್ಥಾನ" ದಿಂದ ಸಂಬಂಧವನ್ನು ಕಳೆದುಕೊಂಡವನಾಗಿರಬಹುದು; ಆದರೆ ಸೈತಾನನು ಯೂದನ ವಿಷಯವಾಗಿದ್ದಲ್ಲಿ **ದೇವರು ನಿತ್ಯವಾದ ಬೇಡಿಗಳನ್ನು ಹಾಕು ಮಹಾದಿನದಲ್ಲಿ ಆಗುವ ದಂಡನೆಯ ತೀರ್ಪುಗಾಗಿ ಅವರನ್ನು ಕತ್ತಲೆಯೊಳಗೆ ಇಟ್ಟಿದ್ದಾನೆ** ಎಂದು ಹೇಳುವದು ವಿಚಿತ್ರವಾಗಿ ಕಂಡುಬರುತ್ತದೆ. ಸೈತಾನನು ಬೇಡಿಗಳನ್ನು ಹಾಕಿಕೊಂಡವನಾಗಿ ಕಂಡುಬರುವದಿಲ್ಲ. ಆತನು ಬಹಳ ಬಲಶಾಲಿಯಾಗಿಯೂ ಮತ್ತು ವಿಶ್ವಾಸಿಗಳು ಇರುವ ಲೋಕದಲ್ಲಿ ಚಟುವಟಿಕೆಯುಳ್ಳವನಾಗಿಯೂ ಕಂಡುಬರುತ್ತಾನೆ.

ಸೈತಾನನ ಮೂಲದಲ್ಲಿ ಮತ್ತು ದೇವದೂತರ ಕಾರ್ಯಗಳಲ್ಲಿ ಆಸಕ್ತಿ ನಮಗೆ ಯೂದನ ವಿಷಯದ ಕುರಿತು ಕಣ್ಣು ತಪ್ಪಿಸಿಕೊಳ್ಳುವದಕ್ಕೆ ಕಾರಣವಾಗುವದಿಲ್ಲ. ಅವನು ತನ್ನ ಓದುಗರಿಗೆ ದೇವರೊಂದಿಗೆ ಅತ್ಯಂತ ನಿಕಟವಾಗಿರುವ ದೇವದೂತರು ಸಹ ಪಾಪ ಮಾಡುವಾಗ ದೇವರಿಂದ ತೀರ್ಪನ್ನು ಹೊಂದುತ್ತಾರೆ (ಯಾವಾಗಲಾದರೂ ಮತ್ತು ಯಾವುದೇ ಪರಿಸ್ಥಿತಿಯಲ್ಲಾದರೂ). ಒಂದು ವೇಳೆ ಪಾಪ ಮಾಡಿದ ದೇವದೂತರನ್ನು ದೇವರು "ನಿತ್ಯವಾದ ಬೇಡಿಗಳಲ್ಲಿ ಇಟ್ಟಿದ್ದರೆ" ಕ್ರೈಸ್ತರು ದೇವರಿಗೆ ವಿಮುಖರಾದರೆ ಆತನು "ನ್ಯಾಯತೀರ್ಪಿನ ಆ ಮಹಾ ದಿನಕ್ಕೆ" ಅವರನ್ನು ಒಪ್ಪಿಸುತ್ತಾನೆ ಎಂಬುದನ್ನು ಯಾರು ಸಂದೇಹಿಸಲು ಸಾಧ್ಯವಿಲ್ಲ. ಸ್ವಧರ್ಮಭ್ರಷ್ಟತೆಯ ಅಪಾಯದ ಕುರಿತು ಯೂದನು ತನ್ನ ಓದುಗರಿಗೆ ಎಚ್ಚರಿಕೆಯನ್ನು ನೀಡುತ್ತಿದ್ದಾನೆ.

ಕತ್ತಲೆಯ ಬೆಂಕಿಯ ಕುರಿತು ಕಲ್ಪಿಸಿಕೊಳ್ಳುವದು ಕಠಿಣವಾಗಿದೆ, ಆದರೆ ಯೇಸು ದುಷ್ಟರಿಗೆ ಆಗುವ ದೇವರ ತೀರ್ಪಿನ ಕುರಿತು ಕತ್ತಲೆಯ ರೂಪಕಾಲಂಕಾರಗಳನ್ನು ಉಪಯೋಗಿಸಿ ಮಂಡಿಸುತ್ತಾನೆ (ಮತ್ತಾಯ 8:12; 25:30). ಮತ್ತು ಬೆಂಕಿ (ಮತ್ತಾಯ 5:22; 13:42). ಯೂದನು ತಮ್ಮ ವಾಸಸ್ಥಾನಗಳು "ಶಾಶ್ವತವಾಗಿವೆ" ಪಾಪ ಮಾಡಿದ ದೇವದೂತರ ತೀರ್ಪಿನ ಗಂಭೀರತೆಯ ಕುರಿತಾಗಿ ಒತ್ತು ನೀಡುತ್ತಾನೆ ಮತ್ತು ಅವರು "ಕತ್ತಲೆಯೊಳಗೆ" ಇದ್ದಾರೆ. ದೇವರು ದೇವದೂತರಿಗೆ ಗಂಭೀರವಾದ ತೀರ್ಪನ್ನು ನೀಡುವದಾದರೆ, ಆತನು ಖಂಡಿತವಾಗಿಯೂ ಯೂದನು ಎದುರಿಸಿದ ಭಕ್ತಿಹೀನ ಬೋಧಕರಿಗೆ ತೀರ್ಪನ್ನು ನೀಡುತ್ತಾನೆ. ಅವರ ತೀರ್ಪು ದೇವದೂತರ ತೀರ್ಪಿನಷ್ಟಾದರೂ ತೀವ್ರವಾಗಿರುತ್ತದೆ.

**ವಚನ 7. ಸೋದೋಮ ಮತ್ತು ಗೊಮೋರಗಳ** ಮೇಲೆ ದೇವರ ನ್ಯಾಯತೀರ್ಪನ್ನು ಆದಿಕಾಂಡ 19ರಲ್ಲಿ ವರ್ಣಿಸಲಾಗಿದೆ. ಪಟ್ಟಣದ ನಾಶನದ ಕುರಿತು Richard J. Bauckham ರವರು ಹೇಳಿದ ಮಾತುಗಳನ್ನು ತೆಗೆದುಕೊಳ್ಳಲಾಗಿದೆ, "ದೈವೀಕ ನ್ಯಾಯ ತೀರ್ಪಿನ ದೃಷ್ಟಿಕೋನದ ವಿಷಯ"[3] ಸತ್ಯವೇದವು ನಕಾರಾತ್ಮಕ ಸಂಗತಿಗಳನ್ನು ಹೊರತುಪಡಿಸಿ ಬೇರೆ ಯಾವ ರೀತಿಯಲ್ಲಿಯೂ ಪಟ್ಟಣಗಳನ್ನು ಮಂಡಿಸುವದಿಲ್ಲ (ಉದಾಹರಣೆಗಾಗಿ

ಧರ್ಮೋಪದೇಶಕಾಂಡ 29:23; ಯೆಶಾಯ 1:9; ಯೆರೆಮೀಯ 23:14; ಮತ್ತಾಯ 10:15 ನೋಡಿರಿ). ಯೂದನು ಕೇವಲ ಈ ಎರಡು ಪಟ್ಟಣಗಳು ಮಾತ್ರ ದೇವರ ನ್ಯಾಯತೀರ್ಪಿನ ಅಡಿಯಲ್ಲಿ ಬರುವದಿಲ್ಲ ಆದರೆ ಅದರ **ಸುತ್ತಲಿರುವ ಪಟ್ಟಣಗಳು** ಸಹ ಬರುತ್ತವೆ ಎಂದು ಸೂಚಿಸಲು ಆದಿಕಾಂಡ 19:24, 25 ಅನುಸರಿಸುತ್ತಾನೆ. ಧರ್ಮೋಪದೇಶಕಾಂಡ 29:23 ಈ ಎರಡು ಪಟ್ಟಣಗಳನ್ನು ಅದ್ಮಾ ಚೆಬೋಯಿಮ್ ಎಂದು ಗುರುತಿಸುತ್ತದೆ (ಹೋಶೆಯ 11:8 ನೋಡಿರಿ). ಲೋಟನು ಓಡಿಹೋದದ್ದರಿಂದ ತಪ್ಪಿಸಿಕೊಂಡ ಇನ್ನೊಂದು ಪಟ್ಟಣ ಚೋಗರ್ (ಆದಿಕಾಂಡ 19:19-22).

"ಸೋದೊಮ್ ಗೊಮೋರ" ಇರುವ ಸ್ಥಳ ತಿಳಿದಿಲ್ಲ ಆದರೆ ಯೆಹೂದಿಯರ ಸಿದ್ಧಾಂತದ ಪ್ರಕಾರ, ಈಗ ಸತ್ತ ಸಮುದ್ರದಿಂದ ಮುಚ್ಚಲ್ಪಟ್ಟಿರುವ ಕಣಿವೆಯ ದಕ್ಷಿಣದ ತುದಿಯಲ್ಲಿತ್ತು. ಈ ಸ್ಥಳವು ಅದರಲ್ಲಿರುವ ಅನೇಕ ಚಿಲುಮೆಗಳು ಮತ್ತು ಖನಿಜ ಸಂಗ್ರಹದಿಂದಾಗಿ ಅನೇಕ ಪ್ರವಾಸಿಗರನ್ನು ಆಕರ್ಷಿಸಿತ್ತು. ಕ್ರಿಸ್ತನ ಜನನದ ಸ್ವಲ್ಪ ಸಮಯ ಪೂರ್ವದಲ್ಲಿ ಅಲೆಗ್ಸಾಂಡ್ರಿಯಾ ಮತ್ತು ಐಗುಪ್ತದ ಯೆಹೂದಿ ಬರಹಗಳಲ್ಲಿ, ಸೋದೊಮ ಮತ್ತು ಗೋಮೋರಗಳ ನ್ಯಾಯತೀರ್ಪಿನ ಕುರಿತು ಆತನು ಏನನ್ನು ನಂಬುತ್ತಾನೆ ಎಂಬುದನ್ನು ವರ್ಣಿಸಲಾಗಿದೆ. ಆತನು ಸೂಚಿಸಿರುವ ಸ್ಥಳವು ಸದಾಕಾಲಕ್ಕೂ ದೂಷಿತವಾಗಿತ್ತು. ಇವು ಆತನ ಮಾತುಗಳಾಗಿವೆ. ಅವರ ದುಷ್ಟತನಕ್ಕೆ ಸಾಕ್ಷಿ ಇನ್ನೂ ಉಳಿದಿದೆ: "ನಿರಂತರವಾಗಿ ಹೊಗೆ ಕಾರುವ ಬೀಳಾದ ಭೂಮಿ, ಗಿಡಗಳು ಹಣ್ಣುಗಳನ್ನು ಬಿಡುತ್ತವೆ ಅವು ಮಾಗುವದಿಲ್ಲ ಮತ್ತು ಅಪನಂಬಿಗಸ್ತ ಆತ್ಮಗಳಿಗೆ ಸ್ಮಾರಕವಾಗಿ ಉಪ್ಪಿನ ಕಂಬಗಳು ನಿಂತಿವೆ."[4] ಈ ಮಾತುಗಳು ಮೃತ ಸಮುದ್ರದೆಡೆಗೆ ದಕ್ಷಿಣ ಕ್ಷೇತ್ರವನ್ನು ಸ್ಪಷ್ಟವಾಗಿ ಪ್ರತಿನಿಧಿಸುತ್ತವೆ. ಸಂಕ್ಷಿಪ್ತವಾಗಿ, ಲೋಟ ಮತ್ತು ಅಬ್ರಹಾಮನ ಕುರಿತಾಗಿ ನಾವು ಸ್ವಲ್ಪ ಮಾತ್ರ ತಿಳಿದಿದ್ದೇವೆ, ಈ ಅವಧಿಯಲ್ಲಿ ನೋಟಕ್ಕೆ ಮಾತ್ರ ಚೆನ್ನಾಗಿ ತೋರುವ ಸಂಪ್ರದಾಯಿಕ ಸ್ಥಳಗಳಾಗಿ ಕಂಡುಬರುತ್ತವೆ, ಅದಕ್ಕಿಂತ ಹೆಚ್ಚಾಗಿ ಹೇಳುವದು ಅನಿಶ್ಚಿತವಾಗಿದೆ.[5]

ಹಿಂದಿನ ಎರಡು ಉದಾಹರಣೆಗಳನ್ನು ಹೊರತುಪಡಿಸಿ (ಅರಣ್ಯದಲ್ಲಿ ಇಸ್ರಾಯೇಲರು ಮತ್ತು ದೇವದೂತರು), ಸೋದೊಮಿನ ವಾಸಿಗಳು ದೇವರ ಆಶೀರ್ವಾದದಾಯಕವಾದ ಸಂಬಂಧವಿಲ್ಲದೆ ಬಿದ್ದುಹೋದರು. ಯೂದನು ಸೋದೊಮ ಮತ್ತು ಗೋಮೋರಗಳನ್ನು ವಿಷಯಲಂಪಟತನವು ದೇವರ ಕೋಪದ ಪರಿಣಾಮವಾದ **ನಿತ್ಯಬೆಂಕಿಯ ದಂಡನೆಯನ್ನು ತರುತ್ತದೆ** ಎಂದು ಎಚ್ಚರಿಸಲು ತೆಗೆದುಕೊಂಡಿದ್ದಾನೆ. ಆತನು ಸೋದೊಮಿನ ಜನರು ಸ್ವಭಾವ **ವಿರುದ್ಧವಾದ ಭೋಗವನ್ನು** *(sarkos heteras)* ಆಯ್ದುಕೊಂಡರು ಎಂದು ದೂರುತ್ತಾನೆ, ಇದನ್ನು ಬಹುಶಃ "ಇತರ ಭೋಗ" ಅಥವಾ "ವಿಭಿನ್ನ ಭೋಗ" ಎಂದು ಅನುವಾದಿಸಬಹುದು. ಈ ವಾಕ್ಯಭಾಗವನ್ನು ಎರಡು ವಿಧದಲ್ಲಿ ಅರ್ಥೈಸಬಹುದು. ಮೊದಲನೆಯದಾಗಿ, ಸೋದೊಮ ಪಟ್ಟಣಕ್ಕೆ ಹೋದ ಇಬ್ಬರು ಅಪರಿಚಿತರು ಮತ್ತು ಲೋಟನ ಅತಿಥಿಗಳಾದವರು, ಬಹುಶಃ ಅವರು ದೇವದೂತರಾಗಿದ್ದರು. ಯೂದನು ಹಿಂದಿನ ವಚನದಲ್ಲಿ ಪಾಪಮಾಡಿದ ದೇವದೂತರನ್ನು ಅದೇ ತಾನೇ ಉಲ್ಲೇಖಿಸಿದ್ದಾನೆ. ಬಹುಶಃ ಸೋದೊಮಿನ ಮನುಷ್ಯರು "ವಿಚಿತ್ರವಾದ ಭೋಗದ" ಹಿಂದೆ ಬಿದ್ದರು, ಅಲ್ಲಿ ಅವರು ದೇವದೂತರೊಂದಿಗೆ ಲೈಂಗಿಕ ಸಂಪರ್ಕವನ್ನು ಹೊಂದಲು ಇಚ್ಛಿಸಿದರು.[6] ಇದು ಸಾಧ್ಯತೆಯಿರುವ ಅರ್ಥವಾಗಿದೆ ಆದರೆ ಸಂಭವನೀಯವಾದದ್ದಲ್ಲ.

ಎರಡನೆಯದಾಗಿ, ಸೋದೊಮಿನ ಪುರುಷರು ಸಲಿಂಗರತಿಗಳಾಗಿದ್ದರು. ಇದು ಹೆಚ್ಚು ಸಂಭವನೀಯವಾದ ಅರ್ಥವಾಗಿದೆ. "ವಿಚಿತ್ರವಾದ ಭೋಗ" ಪುರುಷನು ಇನ್ನೊಬ್ಬ ಪುರುಷನೊಂದಿಗೆ ಲೈಂಗಿಕ ಸಂಪರ್ಕವನ್ನು ಹೊಂದುವದಾಗಿದೆ. ಸೋದೊಮಿನ ಪುರುಷರು ಲೋಟನ ಅತಿಥಿಗಳು ದೇವದೂತರಾಗಿದ್ದರು ಎಂಬುದರ ಸುಳಿವನ್ನು ಹೊಂದಿರಲಿಲ್ಲ. ಅವರು ದೇವದೂತರಾಗಿದ್ದರು ಎಂಬ ಕಾರಣದಿಂದಾಗಿ ಅಲ್ಲ ಅವರು ಪುರುಷರಾಗಿದ್ದರು ಎಂಬ

ಕಾರಣದಿಂದಾಗಿ ಸೋದೊಮಿನ ಪುರುಷರು ಲೋಟನ ಮನೆಯಲ್ಲಿರುವ ಅತಿಥಿಗಳೊಂದಿಗೆ ಲೈಂಗಿಕ ಸಂಪರ್ಕವನ್ನು ಹೊಂದಲು ಪ್ರಯತ್ನಿಸಿದರು. ಸೋದೊಮಿನ ಪುರುಷರು ದೇವರು ಜನರಲ್ಲಿ ಇಟ್ಟಿರುವ ಲೈಂಗಿಕ ಇಚ್ಛೆಯನ್ನು ದುರುಪಯೋಗಪಡಿಸಿಕೊಂಡರು.

ಸಮರ್ಪಣೆ ಮತ್ತು ವಿವಾಹದ ಸನ್ನಿವೇಶದಲ್ಲಿ ವ್ಯಕ್ತಪಡಿಸಿದ ಹಾಗೆ, ಮಾನವನ ಲೈಂಗಿಕತೆ ದೇವರು ತನ್ನ ಸೃಷ್ಟಿಗೆ ನೀಡಿರುವ ಉತ್ತಮವಾದ ವರಗಳಲ್ಲಿ ಒಂದಾಗಿದೆ. ಹಾಗೂ, ಮಾನವನ ಲೈಂಗಿಕತೆ ದೇವರು ತನ್ನ ಸೃಷ್ಟಿಗೆ ನೀಡಿರುವ ಉತ್ತಮವಾದ ವರಗಳಲ್ಲಿ ಒಂದಾಗಿದೆ. ಹಾಗೂ, ಪುರುಷನು ಇನ್ನೊಬ್ಬ ಪುರುಷನೊಂದಿಗೆ ಲೈಂಗಿಕ ಸಂಬಂಧವನ್ನು ಅವರಿಗೆ "ವಿಚಿತ್ರವಾದ ಭೋಗವಾಗಿದೆ." ಇದು ಸೃಷ್ಟಿಯ ಕ್ರಮಕ್ಕೆ ವಿರುದ್ಧವಾದದ್ದಾಗಿದೆ. ಈ ಕಾರಣದಿಂದಾಗಿ ಯೂದನು ಈ ವಿಧದ ಭಾಷೆಯನ್ನು ಉಪಯೋಗಿಸಿದ್ದಾನೆ.

ಆದಿಕಾಂಡ 19ರಲ್ಲಿರುವ ಕಥೆಯು ಗಿಬೆಯ ಕತೆಯಲ್ಲಿರುವ ಜನರೊಂದಿಗೆ ಕೆಲವು ಸಾಮಾನ್ಯ ಅಂಶಗಳನ್ನು ಹೊಂದಿದೆ (ನ್ಯಾಯಸ್ಥಾಪಕರು 19). ವಿರೋಧಾತ್ಮಕ ಹೇಳಿಕೆಗಳಿದ್ದಾಗ್ಯೂ, ಸಲಿಂಗರತಿ ಹಳೆ ಒಡಂಬಡಿಕೆಯಲ್ಲಿ ದೃಢವಾಗಿ ಖಂಡಿಸಲಾಗಿದೆ (ಯಾಜಕಕಾಂಡ 20:13) ಮತ್ತು ಹೊಸ ಒಡಂಬಡಿಕೆಯಲ್ಲಿ (ರೋಮಾಪುರ 1:26, 27; 1 ಕೊರಿಂಥ 6:9). ಸೋದೊಮಿನ ಪುರುಷರು ತಮ್ಮ ಲೈಂಗಿಕ ದುರ್ವ್ಯವಹಾರದಲ್ಲಿ ದೇವರ ವಿರುದ್ಧವಾಗಿ ಪಾಪಮಾಡಿರುವ ಅಪರಾಧಿಗಳಾಗಿರುವದು ಮಾತ್ರವಲ್ಲ ಅವರು ದೌರ್ಜನ್ಯವನ್ನು ಮಾಡುವ ಜನರಾಗಿದ್ದರು. ಅವರು ಲೋಟನ ಮನೆಯಲ್ಲಿದ್ದ ಅಪರಿಚಿತರ ಮೇಲೆ ಅತ್ಯಾಚಾರವನ್ನು ಮಾಡಲು ಇಚ್ಛಿಸಿದ ಜನರಾಗಿದ್ದರು. ಯೂದನು ದೌರ್ಜನ್ಯದ ನಡತೆಯ ಕುರಿತು ಉಲ್ಲೇಖಿಸಿಲ್ಲ. ಆತನು ಸೋದೊಮಿನವರ ಒಟ್ಟಾರೆ ಅನೈತಿಕತೆಯ ಮೇಲೆ ಕೇಂದ್ರಿಕರಿಸುತ್ತಾನೆ. ಅವರು ತಮ್ಮ ಅನೈತಿಕ ಮಾರ್ಗಗಳಲ್ಲಿ ಅವರು ಯೂದನು ಎದುರಿಸಿದ ಸುಳ್ಳು ಬೋಧಕರಂತಿದ್ದರು.

ಇದೇ ರೀತಿಯಲ್ಲಿ ಇವರಂತೆ ಫರಿಸಾಯರು "ಇವು" (*toutois*) ಎಂಬ ಸರ್ವನಾಮ ಮೊದಲು ಸಂಭವಿಸಿದ ಕೆಲವು ಕಠಿಣತೆಗಳನ್ನು ಮಂಡಿಸಿದಂತೆ ಸ್ಪಷ್ಟವಾಗಿಲ್ಲ. "ಇವು" ಏನನ್ನು ಉಲ್ಲೇಖಿಸುತ್ತದೆ? ಇದು ಸೋದೊಮ ಗೋಮೋರ ಪಟ್ಟಣಗಳನ್ನು ಮೂರ್ತಿಕೃತಗೊಳಿಸುವ ಅಲಂಕಾರವಾಗಿದೆಯೋ? ವಿಷಯವು ಇದಾಗಿದ್ದಲ್ಲಿ ನಾವು ಸರ್ವನಾಮಪದವು ಸ್ತ್ರಿಲಿಂಗವಾಗಿದೆ ಎಂಬುದನ್ನು ಒಪ್ಪಿಕೊಳ್ಳಬೇಕು, ಗ್ರೀಕ್ ಭಾಷೆಯಲ್ಲಿ "ಪಟ್ಟಣ" ಸ್ತ್ರೀಲಿಂಗದ ನಾಮಪದವಾಗಿದೆ, ಆದರೆ ವಾಕ್ಯಭಾಗದಲ್ಲಿರುವ ಸರ್ವನಾಮಪದ "ಇವು" ಪುಲ್ಲಿಂಗವಾಗಿದೆ. ಗ್ರೀಕ್ ಭಾಷೆಯ ವ್ಯಾಕರಣ ಇದನ್ನು "ಇವು" ಎಂಬ ಪದವನ್ನು ಸೋದೊಮ ಮತ್ತು ಗೋಮೊರ ಪಟ್ಟಣದೊಂದಿಗೆ ಜೋಡಿಸುವದು ಕಠಿಣವಾಗಿದೆ.

ಹಾಗಿದ್ದಲ್ಲಿ "ಇವು" ಎಂಬುದು ಹಿಂದಿನ ವಚನದ ದೇವದೂತರನ್ನು ಉಲ್ಲೇಖಿಸುತ್ತದೋ? ಅದು ನಿಜವಾಗಿದ್ದಲ್ಲಿ, ಯೂದನು "ದೇವದೂತರು ತಮ್ಮ ಸ್ವಂತ ವಾಸಸ್ಥಾನವನ್ನು ಕಾಪಾಡಿಕೊಳ್ಳದೇ" ಎಂದು ವಚನ 6ರಲ್ಲಿ ಹೇಳುವಾಗ ಅವರು ವ್ಯಭಿಚಾರದ ಅಪರಾಧ ವನ್ನು ಮಾಡುವವರು ಮತ್ತು "ವಿಚಿತ್ರವಾದ ಭೋಗದ" ಹಿಂದೆ ಹೋಗುವವರು ಎಂದು ಹೇಳಿರಬಹುದು. ಯೂದನ ಪತ್ರಿಕೆಯ 6ನೇ ವಚನದಲ್ಲಿರುವ ದೇವದೂತರು, ಆದಿಕಾಂಡ 6:1, 2ರಂತೆ "ದೇವ ಪುತ್ರರು" ಮತ್ತು "ಮನುಷ್ಯ ಪುತ್ರಿಯರನ್ನು" ತಮ್ಮ ಹೆಂಡತಿಯರನ್ನಾಗಿ ಮಾಡಿಕೊಂಡಿರುವ ಸಾಧ್ಯತೆಯಿದೆ. ಆದಿಕಾಂಡ 6ನೇ ಅಧ್ಯಾಯದಲ್ಲಿ ಬರುವ "ದೇವ ಪುತ್ರರು" ಸಹಜವಾಗಿ ಲೈಂಗಿಕ ಅಪರಾಧವನ್ನು ಮಾಡಿದವರಾಗಿದ್ದರು. ಹಾಗು, ಇದು ಯೂದನ ಅರ್ಥವಾಗಿದ್ದಲ್ಲಿ, ಆತನು ತನ್ನ ಓದುಗರನ್ನು ತನ್ನ ಭಾಷೆಯ ಮಾರ್ಮಿಕತೆಯೆಡೆಗೆ ಜಾಣತನದಿಂದ ತಿರುಗಿಸುತ್ತಾನೆ ಎಂದು ನಿರೀಕ್ಷಿಸುತ್ತಾನೆ. ಆದಿಕಾಂಡ 6 ದೇವರು "ದೇವ ಪುತ್ರರನ್ನು" ಶಾಶ್ವತವಾದ ಬಂಧನದಲ್ಲಿಟ್ಟನು ಎಂಬುದಕ್ಕಿಂತ ಹೆಚ್ಚಾಗಿ ಯಾವುದೇ ದಂಡನೆಯನ್ನು ಬರಮಾಡಿದರ ಕುರಿತಾಗಿ ಹೇಳುವದಿಲ್ಲ.

ಒಂದು ವೇಳೆ "ಇವು" ಎಂಬ ಪದವು ಸೋದೋಮ ಮತ್ತು ಗೋಮೋರ ಅಥವಾ ವಚನ 6 ರಲ್ಲಿರುವ ದೇವದೂತರನ್ನು ಉಲ್ಲೇಖಿಸದಿದ್ದಲ್ಲಿ, ಇನ್ನು ಇರುವ ಒಂದೇ ಒಂದು ಸಾಧ್ಯತೆ ಎಂದರೆ ಯೂದ 4 ರಲ್ಲಿರುವ "ಭಕ್ತಿಹೀನ" ವ್ಯಕ್ತಿಗಳನ್ನು ಉಲ್ಲೇಖಿಸುತ್ತದೆ ಎಂದಾಗುತ್ತದೆ. ಯೂದನ ಮಾತುಗಳನ್ನು ಅರ್ಥೈಸಿಕೊಳ್ಳಲು ಇದು ಉತ್ತಮವಾದ ಮಾರ್ಗವಾಗಿದೆ. ಹಾಗಿದ್ದಲ್ಲಿ ಅರ್ಥವೆಂದರೆ: "ಅವರು (ಸೋದೋಮಿನ ಪುರುಷರು), ಇವರಂತೆ ಇರುವವರು (ಸುಳ್ಳು ಬೋಧಕ ರಂತೆ) ಒಟ್ಟಾರೆ ಅನೈತಿಕತೆಯಲ್ಲಿ ತೊಡಗಿಸಿಕೊಂಡವರು."

## ಸುಳ್ಳು ಬೋಧಕರ ವರ್ಣನೆ (8-13)

**8ಹೀಗಿದ್ದರೂ ಈ ಜನರು ಸ್ವಪ್ನಾವಸ್ಥೆಯಲ್ಲಿರುವವರಂತೆ ಅದೇ ರೀತಿಯಾಗಿ ಶರೀರವನ್ನು ಮಲಿನಮಾಡಿಕೊಳ್ಳುತ್ತಾರೆ. ಪ್ರಭುತ್ವವನ್ನು ಅಸಡ್ಡೆಮಾಡುತ್ತಾರೆ. ಮಹಾ ಪದವಿಯವರನ್ನು ದೂಷಿಸುತ್ತಾರೆ. 9ಆದರೆ ಪ್ರಧಾನ ದೇವದೂತನಾದ ಮಿಕಾಯೇಲನು ಮೋಶೆಯ ಶವದ ವಿಷಯದಲ್ಲಿ ಸೈತಾನನೊಂದಿಗೆ ವ್ಯಾಜ್ಯವಾಡಿ ವಾಗ್ವಾದಮಾಡಿದಾಗ ಅವನು ಸೈತಾನನೊಂದಿಗೆ ವ್ಯಾಜ್ಯವಾಡಿ ವಾಗ್ವಾದಮಾಡಿದಾಗ ಅವನು ಸೈತಾನನ ಮೇಲೆ ದೂಷಣಾಭಿಪ್ರಾಯವನ್ನು ಹೇಳುವದಕ್ಕೆ ಧೈರ್ಯಗೊಳ್ಳದೆ. ಕರ್ತನು ನಿನ್ನನ್ನು ಖಂಡಿಸಲಿ ಅಂದನು. 10ಆದರೆ ಈ ಜನರು ತಮಗೆ ಗೊತ್ತಿಲ್ಲದ ಎಲ್ಲವನ್ನೂ ದೂಷಿಸುತ್ತಾರೆ ಮತ್ತು ತಾವು ವಿವೇಕಶೂನ್ಯ ಪಶುಗಳಂತೆ ಸ್ವಾಭಾವಿಕವಾಗಿ ಯಾವವುಗಳನ್ನು ತಿಳಿದುಕೊಳ್ಳುತ್ತಾರೋ ಅವುಗಳಲ್ಲಿ ತಮ್ಮನ್ನು ಕೆಡಿಸಿಕೊಳ್ಳುತ್ತಾರೆ. 11ಅವರ ಗತಿಯನ್ನು ಏನು ಹೇಳಲಿ; ಇವರು ಕಾಯಿನನ ಮಾರ್ಗವನ್ನು ಹಿಡಿದವರೂ ದ್ರವ್ಯಸಂಪಾದನೆಗೋಸ್ಕರ ಬಿಳಾಮನ ಭ್ರಾಂತಿಯಲ್ಲಿ ಪೂರ್ಣವಾಗಿ ಮುಳುಗಿದವರು ಕೋರಹನಂತೆ ಎದುರು ಮಾತುಗಳನ್ನಾಡಿ ನಾಶವಾಗಿ ಹೋಗ ತಕ್ಕವರು ಆಗಿದ್ದಾರೆ. 12ಇವರು ಸಮುದ್ರದೊಳಗಿರು ಗುಪ್ತವಾದ ಬಂಡೆಗಳಂತಿದ್ದು ನಿಮ್ಮ ಪ್ರೇಮಭೋಜನಗಳಲ್ಲಿ ಸೇರಿ ತಿಂದು ಕುಡಿಯುತ್ತಾರೆ; ನಿರ್ಭಯವಾಗಿ ಸ್ವಂತ ಹೊಟ್ಟೆಯನ್ನೇ ನೋಡಿಕೊಳ್ಳುವ ಕುರುಬರಾಗಿದ್ದಾರೆ. ಇವರು ಗಾಳಿಯಿಂದ ಹೊಡಿಸಿಕೊಂಡು ಹೋಗುವ ನೀರಿಲ್ಲದ ಮೇಘಗಳೂ, ಎಲೆಗಳುದುರಿ ಹಣ್ಣು ಬಿಡದೆ ಒಣಗಿಹೋಗಿ ಬೇರು ಸಹಿತ ಕತ್ತು ಬಿದ್ದ ಮರಗಳೂ, ಸ್ವಂತ ಅವಮಾನವೆಂಬ ನೊರೆಯನ್ನು ಕಾರುವ ಸಮುದ್ರದ ಹುಚ್ಚು ತೆರೆಗಳೂ ಆಗಿದ್ದಾರೆ. ಅಲೆಯುವ ನಕ್ಷತ್ರಗಳಾದ ಇವರ ಪಾಲಿಗೆ ಕಾರ್ಗತ್ತಲೆಯು ಸದಾಕಾಲವು ಇಟ್ಟಿರುವದು.**

ಹಳೆ ಒಡಂಬಡಿಕೆಯಲ್ಲಿರುವ ಆಕರ್ಷಕ ಉದಾಹರಣೆಗಳು ಮತ್ತು ಯೆಹೂದ್ಯರ ಒಡಂಬಡಿಕೆಯ ಮಧ್ಯದಲ್ಲಿರುವ ಬರಹಗಳೊಂದಿಗೆ ಯೂದನು ಸುಳ್ಳು ಬೋಧಕರ ನಿಂದನೆಯನ್ನು ಮುಂದುವರೆಸುತ್ತಾನೆ. ಆದಾಗ್ಯೂ, ಆತನು ಅವರ ಬೋಧನೆಯ ಕುರಿತಾಗಿ ವಿಶಿಷ್ಟವಾದದ್ದೇನನ್ನೂ ಸಂಬೋಧಿಸುವದಿಲ್ಲ. ಅವರು ಅಹಂಕಾರಿಗಳಾಗಿದ್ದರು. ಅವರಿಗೆ ಆತ್ಮೀಕ ಅಧಿಕಾರಿಗಳ ಬಗ್ಗೆ ಗೌರವವಿರಲಿಲ್ಲ. ಅವರು ಅಜ್ಞಾನಿಗಳಾಗಿದ್ದರು ಮತ್ತು ತಿದ್ದುಪಡಿಗೆ ಪ್ರತಿಕ್ರಿಯಿಸುತ್ತಿರಲಿಲ್ಲ. ಅವರು ವಿವೇಚನೆ ಮತ್ತು ತಿಳುವಳಿಕೆಯುಳ್ಳ ಮಾನವ ಜೀವಿಗಳಿಗಿಂತ ಹೆಚ್ಚಾಗಿ ಕ್ರೂರ ಪ್ರಾಣಿಗಳಂತಿದ್ದರು. ಬಹುಶಃ ಯೂದನು ಮನಸ್ಸಿನಲ್ಲಿಟ್ಟುಕೊಂಡಿರುವವರಿಗೆ ಆತ್ಮೀಕ ಸಂಗತಿಗಳಲ್ಲಿ ಆಳವಾದ ತಿಳುವಳಿಕೆ ಇರಲೇಯಿಲ್ಲ. ಯೂದನಿಗೆ ಅವರ ಬೋಧನೆಯ ಪರಿಣಾಮಗಳಿಗಿಂತ, ಅವರ ಬೋಧನೆಯಲ್ಲಿ ಅಷ್ಟೊಂದು ಆಸಕ್ತಿ ಇದ್ದಂತೆ ತೋರು ವದಿಲ್ಲ. ಅವರು ತಮ್ಮ ಭಕ್ತಿಹೀನ ನಡತೆಯ ಮೂಲಕ ಅವರು ಬೋಧಿಸುವದಕ್ಕಿಂತ ಹೆಚ್ಚಾಗಿ ಅವರ ಇಂಥಹ ನಡತೆಯ ಖಂಡನೆ ಆತನನ್ನು ಬಹಳವಾಗಿ ಬೇಸರಪಡಿಸಿತು. ಕೊನೆಯಲ್ಲಿ, ಅವರು ತಾವು ಏನನ್ನು ನೀಡಲು ಅಶಕ್ತರೋ ಅದನ್ನು ವಾಗ್ದಾನ ಮಾಡಿದರು (2 ಪೇತ್ರ 2:19 ನೋಡಿರಿ).

**ವಚನ 8.** ಹಿಂದಿನ ವಚನದಲ್ಲಿ ಸುಳ್ಳು ಬೋಧಕರ ಕುರಿತು ಪ್ರಸ್ತಾಪಿಸಿದ ನಂತರ. ಯೂದನು ಈಗ ನೇರವಾಗಿ ಅವರೆಡೆಗೆ ತನ್ನ ಗಮನವನ್ನು ತಿರುಗಿಸುತ್ತಾನೆ. ಅವನು ತಾನು ಮಂಡಿಸಿದ ಮೂರು ಉದಾಹರಣೆಗಳನ್ನು ಸೇರಿಸಿರುವದರ ಕುರಿತು ಹೇಳುತ್ತಾನೆ. ಸುಳ್ಳು ಬೋಧಕರು ದೇವರ ನ್ಯಾಯತೀರ್ಪಿನ ಹಿಂದಿನ ಉದಾಹರಣೆಗಳ ಮೂಲಕ ಏನನ್ನು ಕಲಿಯಲಿಲ್ಲ. ಅವರು ಅಪನಂಬಿಗಸ್ತ ಇಸ್ರಾಯೇಲರಲ್ಲಿ ಮತ್ತು ತಮ್ಮ ಸ್ವಂತ ವಾಸಸ್ಥಾನವನ್ನು ಕಾಪಾಡಿಕೊಳ್ಳುದ ದೇವದೂತರಲ್ಲಿ ಮತ್ತು ಸೋದೊಮ ಮತ್ತು ಗೋಮೊರನಲ್ಲಿರುವ ಪುರುಷರಲ್ಲಿ ಕಂಡುಬರುವ ಅದೇ ವಿಧದ ಅವಿಧೇಯತೆಯನ್ನು ಮುಂದುವರೆಸಿದರು.

ಸುಳ್ಳು ಬೋಧಕರ ಕನಸುಗಳು ಎಷ್ಟರ ಮಟ್ಟಿಗೆ ಅವರ ದಂಗೆಯಲ್ಲಿ ಹೊಂದಿಕೆಯಾಗುತ್ತದೆ ಎಂಬುದನ್ನು ನಿರ್ಧರಿಸುವದು ಕಠಿಣವಾಗಿದೆ. **ಸ್ವಪ್ನಾವಸ್ಥೆಯಲ್ಲಿರುವವರಂತೆ** ಎಂಬ ಪದವನ್ನು ಅನುವಾದಿಸುವ ಪ್ರಯತ್ನವನ್ನು KJV ಮಾಡುತ್ತದೆ. ಆದರೆ ಗ್ರೀಕ್ ಪದದಲ್ಲಿ "ಸಪ್ನಾವಸ್ಥೆಯ" *(enupniazomai)* ಕುರಿತು ಏನೂ ಇಲ್ಲ ಅದು ಲೈಂಗಿಕ ಅನೈತಿಕತೆಯನ್ನು ಸೂಚಿಸುತ್ತದೆ, ಒಂದು ವೇಳೆ ಅದು "ಮಲೀನತ್ವಕ್ಕೆ" ಪೂರಕವಾಗಿ ಸೇರಿಸುವದಾಗಿರಬಹುದು. ಯೂದನ ವಿರೋಧಿಗಳು ತಾವು ಮಾಡಬೇಕೆಂದು ಉದ್ದೇಶಿಸಿದ ಕಾರ್ಯಗಳ "ಸಪ್ನಾವಸ್ಥೆಗೆ" ತಮ್ಮನ್ನು ತಾವು ತೊಡಗಿಸಿ ತಮ್ಮ ಮನಸ್ಸನ್ನು ಅನೈತಿಕತೆಯ ಮೇಲೆ, ಲೈಂಗಿಕ ಅನೈತಿಕತೆಯ ಸಾಧ್ಯತೆಗಳ ಮೇಲೆ ನೆಲೆಗೊಳಿಸಿದ್ದರು ಎಂದು KJV ಸಲಹೆ ನೀಡುತ್ತದೆ. "ಅನ್ಯಾಯದ ಯೋಜನೆಯ" ಕುರಿತಾದ "ತಮ್ಮ ಹಾಸಿಗೆಗಳಲ್ಲೇ ಅನ್ಯಾಯವನ್ನು ಯೋಚಿಸಿ" (ಮೀಕ 2:1) ಎಂಬ ಮೀಕನ ವರ್ಣನೆಯನ್ನು ಜ್ಞಾಪಿಸಿಕೊಳ್ಳಬಹುದು.

ಹೆಚ್ಚು ಸಂಭವನೀಯ ಸಾಧ್ಯತೆ ಎಂದರೆ ಯೂದನ ವಿರೋಧಿಗಳು ತಮ್ಮ ಸಿದ್ಧಾಂತವನ್ನು ಮತ್ತು ತಮ್ಮ ಅನೈತಿಕತೆಯನ್ನು ದೇವರು ತಮಗೆ ನೀಡಿದ ಕನಸುಗಳು ಎಂದು ಅರಿಕೆಮಾಡುವದರ ಮೂಲಕ ಸಮರ್ಥಿಸಿಕೊಂಡರು. ಒಂದು ವೇಳೆ ಅದು ಸತ್ಯವಾಗಿದ್ದಲ್ಲಿ KJVಯಲ್ಲಿ ಪೂರಕವಾಗಿ ಸೇರಿಸಿರುವ "ಮಲೀನ" ಎಂಬ ಪದವು ವಿಷಯವನ್ನು ಗಲಿಬಿಲಿಗೊಳಿಸುತ್ತದೆ. J. N. D. Kelly ರವರ ಪ್ರಕಾರ ಯೂದನು ಸುಳ್ಳು ಬೋಧಕರ "ಸಪ್ನಾವಸ್ಥೆಯೆಡೆಗೆ" ಗಮನವನ್ನು ಸೆಳೆಯುತ್ತಾನೆ, ಯಾಕಂದರೆ ಅವರು ಸಂಮೋಹಕ ಕಾಲ್ಪನಿಕ ಅನುಭವಗಳನ್ನು ಹೊಂದಿದ್ದರು ಅಥವಾ ಅವುಗಳನ್ನು ಹೊಂದಿದ್ದೇವೆ ಎಂಬ ಹೇಳಿಕೆಯನ್ನು ನೀಡುತ್ತಿದ್ದರು ಮತ್ತು ತಮ್ಮ ಸಿದ್ಧಾಂತ ಮತ್ತು ಅಭ್ಯಾಸವನ್ನು ಇವುಗಳ ಬಲದ ಮೇಲೆ ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು.[7] Kelly ಬಹುಶಃ ಸರಿಯಾಗಿ ಹೇಳಿದ್ದಾನೆ.

ಕಾಲ್ಪನಿಕ ಅನುಭವಗಳ ಹೇಳಿಕೆ ಆಧುನಿಕ ಮತ್ತು ಪ್ರಾಚೀನ ಸುಳ್ಳುಬೋಧಕರು ಜನರ ಭರವಸೆಯನ್ನು ಮತ್ತು ತಮ್ಮ ಹೇಳಿಕೆಗಳಿಗೆ ವಿಶ್ವಾಸವನ್ನು ಗಳಿಸಲು ಉಪಯೋಗಿಸುವ ಸಾಮಾನ್ಯ ತಂತ್ರವಾಗಿದೆ. ಇದನ್ನು ಹೊಸ ಒಡಂಬಡಿಕೆಯಲ್ಲಿ ಎಲ್ಲೆಡೆ ನೋಡಬಹುದು. ಪೇತ್ರನು ತನ್ನ ಸ್ವಂತ ದರ್ಶನಗಳನ್ನು "ಶ್ರೇಷ್ಟ ಅಪೊಸ್ತಲರ" ದರ್ಶನಗಳೆಂದು ತನಗೆ ಹೇಳಿ ಕೊಂಡಿದ್ದರ ವ್ಯತ್ಯಾಸವನ್ನು ತೋರಿಸುತ್ತಾನೆ (2 ಕೊರಿಂಥ 12:1-4; ನೋಡಿರಿ 2 ಕೊರಿಂಥ 11:5; 12:11; NIV). ಕೊಲಸ್ಸೆಯಲ್ಲಿ ಸಭೆಗೆ ಭಯವನ್ನು ಹುಟ್ಟಿಸುತ್ತಿದ್ದವರು ತಾವು ನೋಡಿದ್ದೇವೆ ಎಂದು ಹೇಳುವ "ದರ್ಶನಗಳ" ಮೇಲೆ ತಮ್ಮ ನಿಲುವನ್ನು ಸಮರ್ಥಿಸಿಕೊಂಡರು (ಕೊಲಸ್ಸೆ 2:18). ಸಮಾನಾಂತರಗೊಳಿಸಲು, ಇದು ಸುಳ್ಳು ಬೋಧಕರ "ಸಪ್ನಾವಸ್ಥೆಯ" ಉತ್ತಮವಾದ ವಿವರಣೆಯಾಗಿದೆ "ಸಪ್ನಾವಸ್ಥೆಯಲ್ಲಿ ಸಹ" ಎಂಬ ವಾಕ್ಯಭಾಗಕ್ಕೆ ಅಲ್ಪವಿ ರಾಮವನ್ನು ನೀಡುವದರ ಮೂಲಕ ಉತ್ತಮವಾಗಿ ಗುರುತಿಸುತ್ತದೆ. NASB ಸುಳ್ಳು ಬೋಧಕರ "ಸಪ್ನಾವಸ್ಥೆಯು" ಅವರು ಕನಿಷ್ಟಪಕ್ಷ ಶರೀರದ ಆಶೆಗಳನ್ನು ಅರಿಕೆ ಮಾಡಿಕೊಳ್ಳುವ ಒಂದು ವಿಧಕ್ಕಿಂತ ಹೆಚ್ಚಿನದಲ್ಲ ಎಂದು ತಮ್ಮನ್ನು ಸಮರ್ಥಿಸಿಕೊಳ್ಳಲು ಉಪಯೋಗಿಸಿದ ಒಂದು ವಿಧಾನವಾಗಿದೆ. ತಾವು ಏನು ಹೇಳುತ್ತಿದ್ದಾರೆ ಎಂಬುದನ್ನು ಪರಿಗಣಿಸದೇ ಅವರು ತಮ್ಮ ಕನಸುಗಳನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ, ಯೂದನು ಅವರ ನಡತೆಯು ಸೋದೊಮಿನ

ಪುರುಷರಲ್ಲಿ ಕಂಡುಬರುವ ನಡತೆಯಂತೆ ಇದೆ ಎಂದು ದೃಢಪಡಿಸುತ್ತಾನೆ.

ಸುಳ್ಳು ಬೋಧಕರು ಒಂದು ರೀತಿಯಲ್ಲಿ ಶರೀರವನ್ನು **ಮಲೀನಮಾಡಿಕೊಳ್ಳುತ್ತಾರೆ** ಮತ್ತು ಇನ್ನೊಂದು ರೀತಿಯಲ್ಲಿ **ಪ್ರಭುತ್ವವನ್ನು ಅಸಡ್ಡೆಮಾಡುತ್ತಾರೆ** ಎಂದು ಹೇಳಲಾಗಿದೆ. ಈ ಫರಿಸಾಯರು ಗ್ರೀಕ್ ಪದಗಳಾದ *men* ಮತ್ತು *de* ಯೊಂದಿಗೆ ನಿಕಟವಾಗಿ ಜೋಡಿ ಸಲ್ಪಟ್ಟಿದ್ದಾರೆ. ಈ ಹಂತದಲ್ಲಿ ಯೂದನ ವರ್ಣನೆ 2 ಪೇತ್ರ 2:10ರಲ್ಲಿರುವ ವರ್ಣನೆಗೆ ಅತ್ಯಂತ ನಿಕಟವಾಗಿದೆ. ಸಹಜವಾಗಿ ಎರಡು ವಾಕ್ಯಭಾಗಗಳು "ಪ್ರಭುತ್ವವನ್ನು ಅಸಡ್ಡೆ ಮಾಡುತ್ತಾರೆ" ಮತ್ತು ದೇವದೂತರ **ಮಹಾ ಪದವಿಯವರನ್ನು ದೂಷಿಸುತ್ತಾರೆ** ಎಂಬುದಾಗಿದೆ, ಇವುಗಳನ್ನು ಒಂದು ಘಟಕವಾಗಿ ಅರ್ಥಮಾಡಿಕೊಳ್ಳಬೇಕು. ಎರಡು ಸುಳ್ಳು ಬೋಧಕರ ಅಹಂಕಾರವನ್ನು ಸ್ಪಷ್ಟೀಕರಿಸುತ್ತವೆ.

"ಮಹಾಪದವಿಯನ್ನು ದೂಷಿಸುತ್ತಾರೆ" ಎಂದು ಯೂದನು ಹೇಳುವಾಗ ಅನುವಾದವು ಸೂಚಿಸುವಷ್ಟು ಆತನು ಸ್ಪಷ್ಟವಾಗಿಲ್ಲ. ಗ್ರೀಕ್ ಪದವು 2 ಪೇತ್ರ 2:10ರಲ್ಲಿರುವದಕ್ಕೆ ಸಮಾನಾಂತರದಲ್ಲಿದೆ. ಹೆಚ್ಚು ವಾಸ್ತವವಾಗಿ ಅನುವಾದಿಸುವಾಗ, ಆತನು ಹೇಳುತ್ತಾನೆ, "ಮಹಾಪದವಿಯಲ್ಲಿರುವವರನ್ನು ದೂಷಿಸುತ್ತಾರೆ." ಅಸಂಖ್ಯಾತ ಇತರ ಅನುವಾದಗಳೊಂದಿಗೆ NASB "ಮಹಾಪದವಿಯವರನ್ನು" ದೇವದೂತರ ಶಕ್ತಿ ಎಂದು ಅರಿತುಕೊಳ್ಳಲು ಉಲ್ಲೇಖಿಸುತ್ತದೆ ಆದರೆ ಅದು ವಿಷಯವಲ್ಲ. 2 ಪೇತ್ರನ ಪುಸ್ತಕದ ವಿಮರ್ಶೆಯಲ್ಲಿ "ಮಹಾಪದವಿಯವರು" ಉತ್ತಮವಾಗಿ ಸಭೆಯ ಅಧಿಕಾರಿಗಳು ಎಂದು ತಿಳಿದುಕೊಳ್ಳಬಹುದೆಂದು ವಾದಿಸುತ್ತೇವೆ. ಅಪೊಸ್ತಲರು ಮತ್ತು ಅಧಿಕಾರದಿಂದ ಮಾತನಾಡುವವರು, ಈ ಪಠ್ಯದಲ್ಲಿ "ಮಹಾಪದವಿಯವರು." ಇನ್ನಿತರ ಪರಿಗಣನೆಗಳಲ್ಲಿ, ದೇವದೂತರ ದೂಷಣೆ ಸುಳ್ಳು ಬೋಧಕರನ್ನು ಹೇಗೆ ಮುನ್ನಡೆಸುತ್ತದೆ ಎಂಬುದನ್ನು ತಿಳಿದುಕೊಳ್ಳುವದು ಕಠಿಣವಾಗಿದೆ. ಯೂದನು ಸಂಬೋಧಿಸಿದ ಸಭೆಗಳಿಗಿರುವ "ಅಧಿಕಾರ" ಕ್ರಿಸ್ತನ ಪ್ರತಿನಿಧಿಗಳ ಕೈಯಲ್ಲಿದೆ, ನಿರ್ದಿಷ್ಟವಾಗಿ, ಅಪೊಸ್ತಲರ ಕೈಯಲ್ಲಿದೆ (ಹೆಚ್ಚಿನ ಮಾಹಿತಿಗಾಗಿ 2 ಪೇತ್ರ 2:10ಬಿ, 11ರಲ್ಲಿರುವ ವಿಮರ್ಶೆಯನ್ನು ನೋಡಿರಿ).

**ವಚನ 9. ಮಿಕಾಯೇಲನೆಂಬ** ದೇವದೂತನನ್ನು ಹೊಸ ಒಡಂಬಡಿಕೆಯಲ್ಲಿ ಮತ್ತು ಪ್ರಕಟನೆ 12:7ರಲ್ಲಿ ಹೆಸರಿಡಿದು ಉಲ್ಲೇಖಿಸಲಾಗಿದೆ. ಇಲ್ಲಿ ಮಾತ್ರ ಆತನನ್ನು **ಪ್ರಧಾನ ದೇವದೂತ** ಎಂದು ಕರೆಯಲಾಗಿದೆ. "ಪ್ರಧಾನ ದೇವದೂತ" ಎಂಬ ಪದವು ಇಲ್ಲಿ ಮತ್ತು 1 ಥೆಸಲೋನಿಕ 4:16ರಲ್ಲಿ ಕಂಡುಬರುತ್ತದೆ. ಮಿಕಾಯೇಲ ಎಂಬ ಹೆಸರುಳ್ಳ ದೇವದೂತನನ್ನು ಮೂರು ಸಾರಿ "ದಿವ್ಯ ಪಾಲಕ" ಎಂದು ದಾನಿಯೇಲನ ಪ್ರವಾದನೆಯ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ (10:13, 21; 12:1). ಹೆಸರಿನ ಅರ್ಥ "ದೇವರಂತೆ ಇರುವಾತನು ಯಾರು?" ಸತ್ಯವೇದದಲ್ಲಿ ಹೆಸರಿನಿಂದ ಕರೆಯಲ್ಪಟ್ಟಿರುವ ದೇವದೂತನೆಂದರೆ ಗಬ್ರಿಯೇಲನು (ದಾನಿಯೇಲ 8:16; 9:21; ಲೂಕ 1:19, 26), ರಫೈಯೇಲ ಎಂಬ ಮೂರನೆಯವನು ಟೋಬಿಟ ಎಂಬ ಕಲ್ಪಿತ ಗ್ರಂಥಗಳುದ್ದಕ್ಕೂ ಕಂಡುಬರುತ್ತದೆ.[8] ಗಬ್ರಿಯೇಲ ಎಂದರೆ "ಶ್ರೇಷ್ಟನಾದ ದೇವಮನುಷ್ಯ" ಮತ್ತು ರಫೈಯೇಲ ಎಂದರೆ "ದೇವರು ಸ್ವಸ್ಥಪಡಿಸಿದ್ದಾನೆ" ಎಂದರ್ಥ.

ಮಿಕಾಯೇಲನ ಕಥೆಯಲ್ಲಿ ಆತನು **ಮೋಶೆಯ ಶವದ ವಿಷಯದಲ್ಲಿ ಸೈತಾನನೊಂದಿಗೆ** ಹೋರಾಟಮಾಡುತ್ತಿದ್ದಾನೆ ಇದು ಹಳೆ ಒಡಂಬಡಿಕೆಯಲ್ಲಿ ಕಂಡುಬರುವದಿಲ್ಲ. ವಿಷಯವು ಇದಾಗಿದ್ದಲ್ಲಿ ಯೂದನ ಕಥೆಗೆ ಮೂಲವು ಯಾವುದಾಗಿರಬಹುದು ಎಂದು ಆಶ್ಚರ್ಯವಾಗುತ್ತದೆ. ಈ ಕಥೆಯು ಸತ್ಯವೇದದಲ್ಲಿ ಇಲ್ಲ ಎಂಬುದಷ್ಟೇ ಅಲ್ಲ, ಪ್ರಾಚೀನ ಕಾಲದಿಂದಲೂ ಸಂರಕ್ಷಿಸಲ್ಪಟ್ಟಿರುವ ಯೂದನಿಗಿಂತ ಪೂರ್ವದಲ್ಲಿರುವ ಯಾವುದೇ ದಾಖಲೆಗಳಲ್ಲಿ ಇದು ಕಂಡುಬರುವದಿಲ್ಲ. ಹಾಗೂ, ಕೆಲವು ಕ್ರೈಸ್ತ ಲೇಖಕರು ಮಿಕಾಯೇಲನು ಮೋಶೆಯ ಶವದ ವಿಷಯದಲ್ಲಿ ಸೈತಾನನೊಂದಿಗೆ ಹೋರಾಟ ಮಾಡಿರುವದನ್ನು ನಂಬುತ್ತಾರೆ ಇದು ಅಂತರ್ ಒಡಂಬಡಿಕೆಗಳ ಪುಸ್ತಕ ಮೋಶೆಯ ಊಹೆಗಳು ಎಂದು ಕರೆಯಲ್ಪಡುವ

ಪುಸ್ತಕದಿಂದ ತೆಗದುಕೊಳ್ಳಲಾಗಿದೆ. ಇಪ್ಪತ್ತೊಂದನೇ ಶತಮಾನದ ದೃಷ್ಟಿಕೋನದಲ್ಲಿ, ಈ ಕಾರ್ಯವು ಯೂದನ ಕಥೆಯ ಮೂಲವಾಗಿದೆಯೋ ಎಂಬುದನ್ನು ತಿಳಿದುಕೊಳ್ಳುವದು ಕಠಿಣವಾಗಿದೆ.

ಪ್ರಾಚೀನ ಕಾಲದ ಹೆಸರಿಲ್ಲದ ಕೃತಿಯ ಭಾಗವು ಸಂರಕ್ಷಿಸಲ್ಪಟ್ಟಿರುವದು ನಿಜವಾಗಿದೆ, ಅದರ ತಾತ್ಪರ್ಯದ ಮೇಲೆ ನಿರ್ಧರಿಸುವಾಗ ಅದನ್ನು ಹೆಚ್ಚು ಸ್ಪಷ್ಟವಾಗಿ ಮೋಶೆಯ ಒಡಂಬಡಿಕೆ ಎಂದು ಕರೆಯಬಹುದು.[9] ಕೆಲವರು ಉಳಿದಿರುವ ಮೋಶೆಯ ಒಡಂಬಡಿಕೆ ಮತ್ತು ಮೋಶೆಯ ಊಹೆಗಳು ಎರಡು ಒಂದೇ ಆಗಿವೆ ಎನ್ನುತ್ತಾರೆ. ಮೋಶೆಯ ಒಡಂಬಡಿಕೆ ಎಂಬ ಕೃತಿ ಅಪೂರ್ಣವಾಗಿದೆ, ಆದರೆ ಅದರ ಭಾಗದಲ್ಲಿ ಮಿಕಾಯೇಲನು ಮೋಶೆಯ ಶವದ ವಿಷಯದಲ್ಲಿ ಸೈತಾನನೊಂದಿಗೆ ಹೋರಾಟ ಮಾಡಿರುವದರ ಕುರಿತು ಪ್ರಸ್ತಾಪವಿಲ್ಲ. ಉಳಿದಿರುವ ಅಪೂರ್ಣ ಕೃತಿ ಮತ್ತು ಮೋಶೆಯ ಊಹೆಗಳು ಎಂಬ ಕೃತಿ ಒಂದೇ ಆಗಿವೆ ಎಂಬುದು ಖಚಿತವಾಗಿಲ್ಲ. ಕೊನೆಯಲ್ಲಿ ಈ ಕಥೆಯ ಮೂಲ ಎಲ್ಲಿಂದ ಬಂದಿದೆ ಎಂಬುದು ಸ್ಪಷ್ಟವಾಗಿಲ್ಲ ಎಂದು ನಾವು ಅರಿಕೆ ಮಾಡಬೇಕಾಗಿದೆ. ಸುದೈವದಿಂದ, ಯೂದನ ಮೂಲಕ ಕುರಿತಾಗಿ ನಮಗಿರುವ ಜ್ಞಾನದ ಕೊರತೆ ಆತನ ವಿಷಯವನ್ನು ಕುಗ್ಗಿಸುವದಿಲ್ಲ.

ಸೈತಾನ ಮತ್ತು ಮಿಕಾಯೇಲರ ಮಧ್ಯದಲ್ಲಿ ನಡೆದ ಘಟನೆಯ ಪ್ರಸ್ತಾಪ ಇತರ ಪ್ರಶ್ನೆಗಳನ್ನು ಉದ್ಭವಿಸುತ್ತದೆ. ಇಂಥಹ ಒಂದು ಕತೆ ನಡೆದಿದೆಯೋ? ಮೋಶೆಯ ದೇಹದ ಕುರಿತಾಗಿ ಸೈತಾನ ಮತ್ತು ಮಿಕಾಯೇಲರ ಮಧ್ಯದಲ್ಲಿ ಹೋರಾಟ ನಡೆದಿದೆಯೋ? ವಿಸ್ತಾರವಾದ ಈ ಪ್ರಶ್ನೆ ಸತ್ಯವೇದದ ಲೇಖಕರು ಇತಿಹಾಸಕ್ಕೆ ನೀಡುವ ಸಾಕ್ಷಿಗೆ ಸಂಬಂಧಿಸಿದೆ. ಯೂದನು ಈ ಘಟನೆಯನ್ನು ಪ್ರಸ್ತಾಪಿಸಿದ್ದರಿಂದ, ಈ ಘಟನೆಯು ನಿಜವಾಗಿಯೂ ಸಂಭವಿಸಿದೆ ಎಂದು ಅರ್ಥೈಸಿಕೊಳ್ಳುವದು ಅವಶ್ಯವಾಗಿದೆಯೋ?

ಈ ಪ್ರಶ್ನೆಗಳು ಪ್ರಾಮುಖ್ಯವಾಗಿವೆ ಯಾಕಂದರೆ ನಾವು "ಪ್ರೇರೆಪಣೆ" ಎಂದು ನಾವು ನೀಡುವ ಅರ್ಥದೊಂದಿಗೆ ಮತ್ತು ಸತ್ಯವೇದವು ಇತಿಹಾಸವನ್ನು ದಾಖಲಿಸುವದನ್ನು ನಾವು ಹೇಗೆ ತಿಳಿದುಕೊಂಡಿದ್ದೇವೆ ಎಂಬ ಸಂಬಂಧಹೊಂದಿವೆ. ಸತ್ಯವೇದದಲ್ಲಿ ಯಾವುದೇ ಕಥೆಯನ್ನು ನಿಜವಾಗಿಯೂ ನಡೆದ ಘಟನೆಗಳ ಮುಖ - ಬೆಲೆಯ ವರ್ಣನೆಯಾಗಿ ತೆಗೆದುಕೊಳ್ಳಬಾರದು. ಉದಾಹರಣೆಗೆ, ಯೇಸು "ಒಬ್ಬಾನೊಬ್ಬ ಮನುಷ್ಯನು ಯೆರೂಸಲೇಮಿನಿಂದ ಘಟ್ಟಾ ಇಳಿದು ಯೆರಿಕೋವಿಗೆ ಹೋಗುತ್ತಿರುವಾಗ ಕಳ್ಳರ ಕೈಗೆ ಸಿಕ್ಕಿದನು" (ಲೂಕ 10:30) ಎಂದು ಹೇಳುವಾಗ ಆತನ ಮಾತುಗಳಲ್ಲಿ ಇತಿಹಾಸವನ್ನು ದಾಖಲಿಸುವ ಯುಕ್ತಿ ಇತ್ತು, ಸನ್ನಿವೇಶ, ಹಾಗೂ, ಪದಗಳು ಸಾಮ್ಯದ ಭಾಗವಾಗಿದ್ದವು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಸಾಮ್ಯವು, ಸ್ವಾಭಾವಿಕವಾಗಿ ತೋರಿಕೆಯ ಚಿತ್ರವನ್ನು ವರ್ಣಿಸುತ್ತದೆ ಆದರೆ ಅದನ್ನು ಇತಿಹಾಸಕ್ಕೆ ಹೋಲಿಸುವ ಯಾವುದೇ ಹೇಳಿಕೆಯನ್ನು ನೀಡುವದಿಲ್ಲ. ನ್ಯಾಯಸ್ಥಾಪಕರ ಪುಸ್ತಕದಲ್ಲಿ, ಗಿದ್ಯೋನ್ಯನ ಮಕ್ಕಳಲ್ಲಿ ಒಬ್ಬನಾದ ಯೋತಾಮನು ಶೆಕೆಮಿನ ಜನರಿಗೆ ಒಂದು ಕಲ್ಪನಾಕತೆಯನ್ನು ಹೇಳಿದನು, "ಮರಗಳು ತಮಗೋಸ್ಕರ ಒಬ್ಬ ಅರಸನನ್ನು ಅಭಿಷೇಕಿಸಬೇಕೆಂದು ಹೊರಟು ಎಣ್ಣೆಯ ಮರದಬಳಿಗೆ ಬಂದು - ನೀನು ಬಂದು ನಮಗೆ ಅರಸನಾಗು ಅಂದವು" (ನ್ಯಾಯಸ್ಥಾಪಕರು 9:8). ಖಂಡಿತವಾಗಿಯೂ ಯೋತಾಮನು ಆ ಸಮಯದಲ್ಲಿ ನಡೆದ ಘಟನೆಯನ್ನು ಹೇಳಲಿಲ್ಲ. ಆತನು ಶೆಕೆಮಿನ ಜನರು ವರ್ತಿಸುತ್ತಿರುವ ರೀತಿಯನ್ನು ತೋರಿಸಲು ಕಲ್ಪನಾಕತೆಗಳ ಸಾಹಿತ್ಯದ ಪ್ರಕಾರವನ್ನು ಉಪಯೋಗಿಸಿದನು.

ಸನ್ನಿವೇಶವು ಕಥೆಯು ನಿಜವಾಗಿ ಆ ಸಮಯದಲ್ಲಿ ನಡೆದ ಘಟನೆಯಾಗಿತ್ತೋ ಎಂಬುದನ್ನು ನಿರ್ಧರಿಸುತ್ತದೆ. ಮೋಶೆಯ ದೇಹಕ್ಕಾಗಿ ಮಿಕಾಯೇಲನು ಮತ್ತು ಸೈತಾನನ ಮಧ್ಯದಲ್ಲಿ ನಡೆದ ಹೋರಾಟದ ವಿಷಯದಲ್ಲಿ, ಓದುಗರಿಗೆ ನಿಜವಾದ ಘಟನೆಯನ್ನು ವರ್ಣಿಸಿದ್ದಾರೋ ಎಂಬುದನ್ನು ನಿರ್ಧರಿಸಲು ಸಹಾಯ ಮಾಡುವಂತೆ ಸ್ವಲ್ಪ ಮಾತ್ರ ಸನ್ನಿವೇಶ

ದಲ್ಲಿದೆ. ಅದು ಅನುಚಿತವಾದದ್ದಲ್ಲ, ಹಾಗೂ, ಮೋಶೆಯ ದೇಹದ ಕಲಹದ ಕಲ್ಪನಾಕತೆ ಯೂದ ಮತ್ತು ಆತನ ಓದುಗರಿಗೆ ಚಿರಪರಿಚಿತವಾದ ಕಥೆಯಾಗಿತ್ತು. ಯೂದನು ಅದು ನಿಜವಾದ ಘಟನೆಯ ದಾಖಲೆಯಾಗಿದೆ ಎಂದು ಅದರ ಮೇಲೆ ಅವಲಂಭಿಸಲು ಬಯಸಲಿಲ್ಲ. ಅದು ಕಲ್ಪನಾ ಕಥೆ ಅಥವಾ ಇತಿಹಾಸ, ಯೂದನು ಹೇಳಬೇಕಾಗಿರುವ ವಿಷಯಕ್ಕೆ ಉದಾಹರಣೆಯಾಗಿ ಕಾರ್ಯಮಾಡಿದೆ. ಕ್ರೈಸ್ತರು ಯೂದನು ವರ್ಣಿಸಿದ ಕಲಹ ನಿಜವಾಗಿ ನಡೆದಿರಬಹುದಾದ ಘಟನೆಯೋ ಎಂಬುದರ ಕುರಿತಾದ ತಮ್ಮ ಅಭಿಪ್ರಾಯದಲ್ಲಿ ಭಿನ್ನವಾಗಿರಬಹುದು. ಕಲಹದಿಂದಾಚೆಗೆ ಇರುವ ಅಂಶವೆಂದರೆ ಈ ಕಥೆಯು ಹಳೆ ಒಡಂಬಡಿಕೆಯೊಂದಿಗೆ ಸಂಬಂಧವನ್ನು ಹೊಂದಿಲ್ಲ ಎಂಬುದೇ.

ಯೂದನು ಜನಪ್ರಿಯ ಸಿದ್ಧಾಂತವನ್ನು ಬಲವಂತದಿಂದ ತಂದಿರಬಹುದು ಅಥವಾ ಇತಿಹಾಸದಲ್ಲಿ ನಡೆದ ಘಟನೆಯನ್ನು ಪ್ರಸ್ತಾಪಿಸಿರಬಹುದು, ವಿಷಯ ಒಂದೇ ಆಗಿದೆ. ಈ ವಿಷಯದಲ್ಲಿ, ಘಟನೆಯು ಇತಿಹಾಸದಲ್ಲಿ ನಡೆದಿದೆಯೋ ಎಂಬುದರ ಸಮರ್ಥನೆಯ ಮೇಲೆ ಅವಲಂಭಿಸಿರುವದಿಲ್ಲ. ಸತ್ಯವೇದದ ಬೋಧನೆಗಳು ಸಂಬಂಧಪಟ್ಟ ಘಟನೆಗಳ ಐತಿಹಾಸಿಕ ಪಾತ್ರಗಳಿಂದ ನೇರವಾಗಿ ಉದ್ಭವಿಸುವ ಇತರ ವಿಷಯಗಳಿವೆ. ಸುರಕ್ಷಿತವಾದ ನಿಯಮವೆಂದರೆ ನಿಜವಾಗಿ ನಡೆದ ಘಟನೆಗಳ ಆಧಾರದ ಮೇಲೆ ಸತ್ಯವೇದದ ಲೇಖಕರು ವಿಷಯವನ್ನು ನೀಡುವಾಗ, ಸತ್ಯವೇದದ ಓದುಗರು ಅದನ್ನು ಇತಿಹಾಸದ ಸಾಕ್ಷಿಯಾಗಿ ತೆಗೆದುಕೊಳ್ಳಬೇಕು. ಇನ್ನೊಂದು ರೀತಿಯಲ್ಲಿ, ವಿಷಯದ ಸಮರ್ಥನೆ ಸರಿಯಾದ ಸಮಯದಲ್ಲಿ ನಡೆದ ಘಟನೆಯೊಂದಿಗೆ ಸಂಬಂಧ ಹೊಂದದಿರುವಾಗ, ಲೇಖಕನು ಇತಿಹಾಸದ ಹಕ್ಕನ್ನು ಸಾಧಿಸುತ್ತಿಲ್ಲ.

ಯೂದನು ವಾಗ್ವದವನ್ನು ಕಡಿಮೆಯಿಂದ ಹೆಚ್ಚಿನದರೆಡೆಗೆ ಒಯ್ಯುತ್ತಿದ್ದಾನೆ, ನಕಾರಾತ್ಮಕತೆ ಇದನ್ನು ಸ್ವಲ್ಪ ಮಟ್ಟಿಗೆ ಅಸ್ಪಷ್ಟವಾಗಿ ಮಾಡಿದಾಗ್ಯೂ, ದೃಶ್ಯ ಹೀಗಿದೆ: ಒಂದು ವೇಳೆ ಮಿಕಾಯೇಲನು [ಸೈತಾನನ] **ವಿರುದ್ಧ ಕಟಕಟೆಯ ನ್ಯಾಯತೀರ್ಪುನ್ನು,** ಪ್ರಕಟಿಸಲು ನಿರಾಕರಿಸಿದ್ದಲ್ಲಿ ಸುಳ್ಳು ಬೋಧಕರು ಎಷ್ಟರಮಟ್ಟಿಗೆ "ತಮಗೆ ತಿಳಿಯದಿರುವ ಸಂಗತಿಗಳನ್ನು ದೂಷಿಸಲು" ನಿರಾಕರಿಸುತ್ತಿರಬಹುದು. ಮಿಕಾಯೇಲನು ತೀರ್ಪನ್ನು ದೇವರಿಗೆ ಬಿಟ್ಟನು, ಅವನು **ಕರ್ತನು ನಿನ್ನ ಕಂಡಿಸಲಿ!** ಅಂದನು. ಮಿಕಾಯೇಲನಿಗೆ ಇಂತಹ ದಂಡನೆಗಳು ಸಮಂಜಸವಾಗಿದ್ದಲ್ಲಿ, ನಶ್ವರ ಪ್ರಾಣಿಗಳು ಇದನ್ನೇ ಮಾಡುವದು ಜಾಣತನವಾಗಿದೆ.

**ವಚನ 10.** ಪೇತ್ರನಂತೆ, ಯೂದನು ಕ್ರೈಸ್ತ ಸಂದೇಶವನ್ನು ಹೊಂದಾಣಿಕೆ ಮಾಡುವತ್ತ ಒಲವನ್ನು ತೋರಿಸುವವರ ದಂಡನೆಯನ್ನು ನಿಗ್ರಹಿಸುವದಿಲ್ಲ. ನಿಶ್ಚಿತವಾದ ತಿರಸ್ಕಾರದೊಂದಿಗೆ ಆತನು **ಈ ಜನರು** ಎಂದು ಉಲ್ಲೇಖಿಸುತ್ತಾನೆ. ವಚನ 8ರಲ್ಲಿ ಆತನು "ಆದರೆ ಅದೇ ರೀತಿಯಲ್ಲಿ ಈ ಜನರು" ಎಂದು ಪ್ರಾರಂಭಿಸುತ್ತಾನೆ. ವಚನ 12ರಲ್ಲಿ "ಇವರು ಸಮುದ್ರದೊಳಗಿರುವ ಗುಪ್ತವಾದ ಬಂಡೆಗಳಂತಿದ್ದಾರೆ" ಎಂದು ಹೇಳುತ್ತಾನೆ.

ಈಗಾಗಲೇ ವಚನ 8ರಲ್ಲಿ ಯೂದನು ಅವರ ಕುರಿತಾಗಿ ಅವರು ಸಭೆಯನ್ನು ನಡೆಸಿಕೊಂಡು ಹೋಗಲು ದೇವರು ನೇಮಿಸಿದ ಮಹಾಪದವಿಯವರನ್ನು "ದೂಷಿಸುತ್ತಾರೆ" ಎಂದು ಹೇಳಿದ್ದಾನೆ. ಒಬ್ಬ ವ್ಯಕ್ತಿಯನ್ನು "ದೂಷಿಸುವದು" ಎಂದರೆ ವ್ಯಕ್ತಿಯ ಕುರಿತು ದುರಂಹಕಾರದಿಂದ ಮಾತನಾಡುವದು. ದೂಷಿಸುವದು ದೇವರಾಗಿದ್ದಲ್ಲಿ, ಅದು "ದೇವದೂಷಣೆ" NEB ಈ ರೀತಿಯಾಗಿ ಅನುವಾದಿಸುತ್ತದೆ, "ಈ ಜನರು ತಾವು ತಿಳಿಯದೆ ಇರುವ ಸಂಗತಿಗಳ ಮೇಲೆ ದೂಷಣೆಯನ್ನು ಪ್ರವಾಹಿಸುತ್ತಾರೆ." **ತಮಗೆ ಗೊತ್ತಿಲ್ಲದ ಸಂಗತಿಗಳನ್ನು ದೂಷಿಸುತ್ತಾರೆ** ಎಂದು NASB ಹೇಳುತ್ತದೆ.

ತಾವೇ ಸ್ವತಃ ಹೇರಿಕೊಂಡ ಅಜ್ಞಾನ ಮತ್ತು ನಿಯಮವಿಲ್ಲದ ಸ್ವ - ಪ್ರಶಂಸೆ ಅವರ ವಿಷಯಲಂಪಟತನದ ಮಾರ್ಗಕ್ಕೆ ತಂದೆಯಾಗಿದೆ (ವಚನ 4). ಯೂದನು "ಈ ಜನರು" ಮತ್ತು ಅವರು ಕ್ರಿಸ್ತನ ಕಾರ್ಯಗಳಿಗೆ ಮಾಡುತ್ತಿರುವ ಹಾನಿಯ ವಿಚಾರದಿಂದ ಎಷ್ಟು

ಕದಲಿದ್ದನೆಂದರೆ, ಆತನ ವಾಕ್ಯಗಳ ಆಯ್ಕೆ ಸರಿಯಾಗಿರಲಿಲ್ಲ. ಆತನು ತನ್ನ ವಿಚಾರವನ್ನು ಮಧ್ಯದಲ್ಲಿಯೇ ತುಂಡರಿಸುತ್ತಾನೆ. ವಚನದ ಕೊನೆಯ ಭಾಗವನ್ನು "... ವಿವೇಕ ಶೂನ್ಯ ಪಶುಗಳಂತೆ ಸ್ವಾಭಾವಿಕವಾಗಿ ಯಾವವುಗಳನ್ನು ತಿಳಿದುಕೊಳ್ಳುತ್ತಾರೋ ಅವುಗಳಲ್ಲಿ ತಮ್ಮನ್ನು ಕೆಡಿಸಿಕೊಳ್ಳುತ್ತಾರೆ"[10] ಅನುವಾದಿಸುವದರ ಮೂಲಕ ಯೂದನ ಮಾತುಗಳಲ್ಲಿರುವ ದಾಹವನ್ನು NIV ಗುರುತಿಸುತ್ತದೆ.

ಯೂದನು "ಈ ಜನರಲ್ಲಿರುವಂತ" ಈ ಜ್ಞಾನವು ಸಂಪೂರ್ಣವಾಗಿ ಪ್ರಾಣಿಗಳಲ್ಲಿರುವ, ಸಹಜಪ್ರವೃತ್ತಿಯ ಹಂತದಲ್ಲಿದೆ. ತಮ್ಮ ಸ್ವಂತ ಅಸ್ತಿತ್ವ ಮತ್ತು ತಮ್ಮ ಸ್ವಂತ ಉನ್ನತಿ ಅವರು ಮಾಡುವ ಕಾರ್ಯಗಳಿಗೆ ಒತ್ತಾಯಪಡಿಸುವ ಅಂಶವಾಗಿದೆ. ಇದಷ್ಟೇ ಅಲ್ಲ, ಸುಳ್ಳುಬೋಧಕರು "ತಮಗೆ ಗೊತ್ತಿಲ್ಲದ ಸಂಗತಿಗಳನ್ನು (ಮಾಡಿದರು)" ತಮಗೆ ಗೊತ್ತಿಲ್ಲದ ಸಂಗತಿಗಳನ್ನು ಪ್ರಕಟಿಸಿದರು. ಕ್ರಿಸ್ತನು ವಿಷಯವಾಗಿರುವಾಗ, ಸುವಾರ್ತೆಯನ್ನು ಅಪ್ಪಿಕೊಳ್ಳುವದರಿಂದ ಹುಟ್ಟುವ ತಿಳುವಳಿಕೆಯ ಹಂತವಿದೆ. ಮೀನು ನೀರಿನಲ್ಲಿ ಜೀವಿಸುವಂತೆ ಕ್ರೈಸ್ತರು ಕ್ರಿಸ್ತನಲ್ಲಿ ಜೀವಿಸುತ್ತಾರೆ. ಇದಕ್ಕೆ ವಿಭಿನ್ನವಾಗಿ, ಸುಳ್ಳು ಬೋಧಕರು ಶಾರೀರಿಕ ಲೋಕದಲ್ಲಿ ಜೀವಿ ಸುತ್ತಾರೆ ಅವರಿಗೆ ಕ್ರಿಸ್ತನಲ್ಲಿ ಜೀವಿಸುವದೆಂದರೆ ಇಲಿಯ ಜಾತಿಯ ಪ್ರಾಣಿ ನೀರಿನಲ್ಲಿ ಜೀವಿ ಸುತ್ತದೆ ಎಂದು ತಿಳಿದುಕೊಂಡತೆ ಇರುತ್ತದೆ. ಅದರಂತೆ ಒಬ್ಬನು ಕ್ರಿಸ್ತನಲ್ಲಿರುವ ಜೀವಿತ ಎಂದರೆ ಏನು ಎಂದು ತಿಳಿದುಕೊಳ್ಳಲು ನೀರಿನಲ್ಲಿ ಜೀವಿಸಬೇಕು ಎಂದಾಗುತ್ತದೆ. ಒಬ್ಬನು ಕ್ರಿಸ್ತನಲ್ಲಿ ಜೀವಿಸಬೇಕಾದರೆ ಅವನು ನಮಗೆ ನೀಡುವ ಸಮಾಧಾನದ ಮತ್ತು ಆತನು ತನ್ನ ಜನರಿಗೆ ನೀಡುವ ಜೀವಿಸುವ ಮಾರ್ಗದ ಕುರಿತು ತಿಳಿದಿರಬೇಕು. "ಈ ಜನರು" ಹಕ್ಕು ಸಾಧಿಸಿರುವದನ್ನು ಗಣನೆಗೆ ತೆಗೆದುಕೊಳ್ಳದೇ, ಅವರು ಕ್ರಿಸ್ತನನ್ನು ಅನುಸರಿಸುವದಿಲ್ಲ, ಈ ಕಾರಣದಿಂದಾಗಿ ಅವರು ತಿಳುವಳಿಕೆಯಿಲ್ಲದವರಾಗಿದ್ದಾರೆ.

ಯೂದನಂತೆ, ಕ್ರೈಸ್ತರು ಆತ್ಮೀಕ ಸಂಗತಿಗಳನ್ನು ಒಂದು ಹಂತದಲ್ಲಿ ತಿಳಿದುಕೊಳ್ಳುತ್ತಾರೆ ಅದನ್ನು ಅಪನಂಬಿಗಸ್ತ ಆತ್ಮಗಳು ತಿಳಿದುಕೊಳ್ಳುವದಿಲ್ಲ ಎಂದು ಪೌಲನು ದೃಢಪಡಿಸುತ್ತಾನೆ. ಈ ವಿಷಯವು 1 ಕೊರಿಂಥದವರಿಗೆ ಬರೆದ ಪತ್ರಿಕೆಯಲ್ಲಿ ಬರುತ್ತದೆ. "ಪ್ರಾಕೃತಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ ಅವು ಅವನಿಗೆ ಹುಚ್ಚುಮಾತಾಗಿ ತೋರುತ್ತವೆ; ಅವು ಆತ್ಮವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು" (1 ಕೊರಿಂಥ 2:14). ಯೂದನು ಇದನ್ನೇ ಉದ್ದೇಶಿಸುತ್ತಾನೆ. ಈ ಜನರು, ಆತನು ಇದನ್ನು ಸಮರ್ಥಿಸುತ್ತಾನೆ, ಅವರು ಕ್ರಿಸ್ತನನ್ನು ಅರಿತವರಲ್ಲ. ಅವರು ತಮ್ಮ ಅಂತಸ್ಫೂರ್ತಿಯ ಮೇಲೆ ಆತುಕೊಳ್ಳುತ್ತಾರೆ ಮತ್ತು ಸಂಪೂರ್ಣವಾಗಿ ಔಪಚಾರಿಕ ಹಂತದಲ್ಲಿ ಜೀವಿಸುತ್ತಾರೆ. ಅವರು ವಿವೇಕಶೂನ್ಯ ಪಶುಗಳಂತಿದ್ದಾರೆ. ಅವರು ಕ್ರೈಸ್ತರಿಗೆ ಉತ್ತಮವಾದವುಗಳು ಎಂದು ಹಕ್ಕು ಸಾಧಿಸುವ ಸಂಗತಿಗಳು ದೇವರಿಂದ ಪ್ರತ್ಯೇಕಿಸುವತ್ತ ನಡೆಸುತ್ತವೆ. ಯೂದನಿಗೆ ಸುಳ್ಳುಬೋಧಕರ ಮಾರ್ಗಗಳು ಎಲ್ಲಿಗೆ ನಡೆಸುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಅವನು ತನ್ನ ಓದುಗರು ಈ ಸಂಗತಿಗಳಿಂದ ನಾಶವಾಗುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕೆಂದು ಬಯಸುತ್ತಾನೆ. ಯೂದನು ತನ್ನ ಸಹೋದರ ಮತ್ತು ಸಹೋದರಿಯರು ಇದೇ ರೀತಿಯ ನಾಶನಕ್ಕಾಗಿ ಅನುಸರಿಸುತ್ತಿದ್ದಾರೆ ಎಂದು ಕಳಕಳಿಯುಳ್ಳವನಾಗಿದ್ದಾನೆ, ಈ ಕಾರಣದಿಂದಾಗಿ ಆತನು ಹೀಗೆ ಬರೆಯುತ್ತಾನೆ (ವಚನಗಳು 3, 4).

**ವಚನ 11.** ಯೂದನು ತನ್ನ ವಿಷಯಕ್ಕೆ ಒತ್ತು ನೀಡುವದನ್ನು ಮುಂದುವರೆಸುತ್ತಾನೆ. ಅವರ **ಗತಿಯನ್ನು ಏನು ಹೇಳಲಿ!** ಎಂದು ಹೇಳುತ್ತಾನೆ. ದೇವರ ವಿರುದ್ಧವಾಗಿ ದಂಗೆ ಎದ್ದ ಇತರರಂತೆ ಅವರು ದೇವರ ಕೋಪದ ತೀರ್ಪನ್ನು ಹೊಂದಿದರು. ಅವನು ಈ ಹಿಂದೆ ಮಾಡಿದಂತೆ, ಯೂದನು ಹಳೆ ಒಡಂಬಡಿಕೆಯಿಂದ ಮೂರು ಉದಾಹರಣೆಗಳನ್ನು ತನ್ನ ವಿಷಯವನ್ನು ಸಮರ್ಥಿಸುವದಕ್ಕಾಗಿ ಒಡಂಬಡಿಕೆಯಿಂದ ಮೂರು ಉದಾಹರಣೆಗಳನ್ನು ತನ್ನ ವಿಷಯವನ್ನು ಸಮರ್ಥಿಸುವದಕ್ಕಾಗಿ ಉಪಯೋಗಿಸುತ್ತಾನೆ. (1) ಸುಳ್ಳು ಬೋಧ

ಕರು **ಕಾಯಿನನ ಮಾರ್ಗವನ್ನು** ಹಿಡಿದಿದ್ದಾರೆ. (2) ಅವರು ಬಿಳಾಮನ ಭ್ರಾಂತಿಯಲ್ಲಿ ಮುಳುಗಿದ್ದಾರೆ. (3) ಇದರೊಟ್ಟಿಗೆ, ತಮ್ಮ ಕೀರ್ತಿಯನ್ನು ಅಪೇಕ್ಷಿಸುವ ಇತರರಂತೆ, ಅದು ದೇವರನ್ನು ವಿರೋಧಿಸುವದಾಗಿದ್ದರೂ ಸಹ, ಈ ಜನರು **ಕೋರಹನಂತೆ ನಾಶವಾಗಿ ಹೋಗುವವರಾಗಿದ್ದಾರೆ.** ಯೂದನು ಈ ಹಿಂದೆ ತನ್ನ ವಿರೋಧಿಗಳನ್ನು ಮೂರು ಗುಂಪುಗಳಿಗೆ ಹೋಲಿಸುತ್ತಾನೆ: ಅಪನಂಬಿಗಸ್ತರಾದ ಇಸ್ರಾಯೇಲರು, ದಂಗೆಯೆದ್ದ ದೇವದೂತರು ಮತ್ತು ಸೋದೊಮಿನ ಪುರುಷರು (ವಚನಗಳು 5-7). ಇನ್ನೂ ಹಳೆ ಒಡಂಬಡಿಕೆಯಿಂದ ತೆಗೆದುಕೊಳ್ಳುತ್ತಾ, ಆತನು ತನ್ನ ಗಮನವನ್ನು ಮೂರು ಪೂರಕ ಉದಾಹರಣೆಗಳಿಗೆ ತಿರುಗಿಸುತ್ತಾನೆ. ಹಿಂದಿನ ಉದಾಹರಣೆ ಗುಂಪುಗಳದ್ದಾಗಿತ್ತು; ಇಸ್ರಾಯೇಲರು, ದೇವದೂತರು ಮತ್ತು ಸೋದೊಮಿನ ಪುರುಷರು. ಈ ವಚನದಲ್ಲಿಯ ಉದಾಹರಣೆ ದೇವರಿಂದ ತೀರ್ಪನ್ನು ಹೊಂದಿದ ವ್ಯಕ್ತಿಗಳದ್ದಾಗಿದೆ.

ಯೂದನು ದೇವರನ್ನು ವಿರೋಧಿಸುವವರಿಗೆ ಆತನ ನ್ಯಾಯ ತೀರ್ಪು ಖಚಿತವಾಗಿದೆ ಎಂದು ನಿರ್ದಿಷ್ಟವಾಗಿ ಹೇಳಲು ಈ ಉದಾಹರಣೆಗಳನ್ನು ಏಕೆ ಆಯ್ಕೆ ಮಾಡಿಕೊಂಡನು ಎಂಬುದಕ್ಕೆ ಕನಿಷ್ಟಪಕ್ಷ ಮೂರು ಕಾರಣಗಳಿವೆ. ಮೊದಲನೆಯದಾಗಿ, ಮೂರು ಉದಾಹರಣೆಗಳು ಯೂದನಿಗೆ ಮತ್ತು ಆತನ ಓದುಗರಿಗೆ ಚಿರಪರಿಚಿತವಾದ ಆತನ ಲೇಖನ ವಿಧಾನದ ಭಾಗಗಳಾಗಿರಬಹುದು. ದುಷ್ಟ ಜನರು ವಿಷಯವಾಗಿರುವಾಗ, ಈ ಮೂರು ಉದಾಹರಣೆಗಳು ಶೇಖರಿಸಿಟ್ಟ ಉದಾಹರಣೆಗಳಾಗಿರಬಹುದು. ಎರಡನೆಯದಾಗಿ, ಯೂದನು ಅವುಗಳನ್ನು ಯಾವುದೇ ನಿರ್ದಿಷ್ಟವಾದ ಕಾರಣವಿಲ್ಲದೇ ಹಾಗೆಯೇ ಆಯ್ಕೆ ಮಾಡಿಕೊಂಡಿರಬಹುದು. ಅವು ಆತನಿಗೆ ಸತ್ಯವೇದದಲ್ಲಿರುವ ಅದೇ ರೀತಿಯ ಉದಾಹರಣೆಗಳ ಉದ್ದವಾದ ಪಟ್ಟಿಯಿಂದ ದೊರಕಿರಬಹುದು. ಮೂರನೆಯದಾಗಿ, ಈ ಉದಾಹರಣೆಗಳಲ್ಲಿ ಏನಾದರೂ ವಿಚಿತ್ರವಾದ ಸಂಗತಿ ಇರಬಹುದು, ಅದು ಯೂದನು ಎದುರಿಸಿದ ವಿಶಿಷ್ಟವಾದ ಬೋಧಕರಿಗೆ ಸಮಂಜಸವಾಗಿರಬಹುದು. ದೇವರಿಗೆ ಅವರು ಅವಿಧೇಯರಾಗಿರುವದರ ಸ್ವರೂಪ ಯೂದನ ವಿರೋಧಿಗಳ ಅವಿಧೆಯತೆಯ ಕ್ರಮದಲ್ಲಿರಬಹುದು.

"ಕಾಯಿನನ ಮಾರ್ಗದ" ಕುರಿತಾಗಿ ಅದರಲ್ಲಿ ಇದೆಯೋ, ಅದು ಯೂದನು ಎದುರಿಸಿದ ಸುಳ್ಳು ಬೋಧಕರ ಉದಾಹರಣೆಯನ್ನು ಸಮಂಜಸವಾಗಿಸಿದೆಯೋ? ಕಾಯಿನನ ಕಥೆ - ಆತನ ದಂಗೆ ಮತ್ತು ಆತನ ಅಪರಾಧದ ಪರಿಣಾಮ - ಆದಿಕಾಂಡ 4ರಲ್ಲಿ ಇದೆ. ಕಾಯಿನನು ತನ್ನ ತಮ್ಮನೊಂದಿಗೆ ಸಿಟ್ಟುಗೊಂಡ ನಂತರ, ದೇವರು ಆತನಿಗೆ ಕಾಣಿಸಿಕೊಂಡನು, ದೇವರು ಕಾಯಿನನ ಕೋಪವನ್ನು ವಿವೇಚನೆಯಿಂದ ನೋಡಿದನು, ಆತನು ಅವನೊಂದಿಗೆ ಅನುಕಂಪದಿಂದ ಮಾತನಾಡಿದನು. ದೇವರು ಅವನಿಗೆ ಆತನ ಕೋಪದ ಕಾರಣವನ್ನು ಕೇಳಿದನು, ಆದರೆ ಆತನು ಕಾಯಿನನ ಕೋಪವು ಸಮರ್ಥಿಸಿಕೊಳ್ಳುವಂತದಲ್ಲ ಎಂಬುದನ್ನು ಸ್ಪಷ್ಟಪಡಿಸಿದನು. ನಂತರ ಆತನು ಹೇಳಿದನು, "ಒಳ್ಳೇ ಕೆಲಸ ಮಾಡಿದರೆ ನಿನ್ನ ತಲೆ ಎತ್ತಲ್ಪಡುವದಲ್ಲವೇ; ಇಲ್ಲದಿದ್ದರೆ ಪಾಪವು ನಿನ್ನನ್ನು ಹಿಡಿಯಬೇಕೆಂದು ಬಾಗಿಲಲ್ಲಿ ಹೊಂಚಿಕೊಂಡಿರುವದು; ಆದರೂ ನೀನು ಅದನ್ನು ವಶಮಾಡಿಕೊಳ್ಳಬೇಕು ಎಂದು ಹೇಳಿದನು" (ಆದಿಕಾಂಡ 4:7). ಅದಾದ ನಂತರ, ಸರಳ ಹೇಳಿಕೆ ಬರುತ್ತದೆ, ಅದು ಹೀಗೆ ಹೇಳುತ್ತದೆ, "ತರುವಾಯ ಕಾಯಿನನು ತನ್ನ ತಮ್ಮನಾದ ಹೇಬೆಲನಿಗೆ" (ಆದಿಕಾಂಡ 4:8ಎ). ಅವನು ಸಹಜವಾಗಿ ದೇವರೊಂದಿಗೆ ತಾನು ಮಾಡಿದ ಸಂಭಾಷಣೆಯ ಕುರಿತಾಗಿ ಹೇಳಿರಬಹುದು. ಬಹುಶಃ ಸಹೋದರರು ವಾಗ್ವಾದ ಮಾಡಿರಬಹುದು, ಆ ವಿಷಯದಲ್ಲಿ ನೇರವಾಗಿ ಏನನ್ನೂ ಹೇಳಿರಲಿಕ್ಕಿಲ್ಲ. ಹಾಗೂ, ಮುಂದಿನ ಪದಗಳು ಅವರು ಹೊಲದಲ್ಲಿದ್ದರು ಮತ್ತು ಕಾಯಿನನು ಹೇಬೆಲನನ್ನು ಕೊಂದನು ಎಂದು ಹೇಳುತ್ತದೆ.

ಹೊಸ ಒಡಂಬಡಿಕೆಯ ಕಾಲದ ಯೆಹೂದ್ಯರು ಕಾಯಿನನ ಕತೆಯಿಂದ ಆಕರ್ಷಿತರಾಗಿದ್ದರು. ಒಂದು ವೇಳೆ ಯೂದನ ಓದುಗರು ಹೆಚ್ಚಾಗಿ ಮತ್ತು ಸಂಪೂರ್ಣವಾಗಿ ಕ್ರಿಸ್ತನಿಗಾಗಿ

ಪರಿವರ್ತಿತರಾದ ಯೆಹೂದ್ಯರಾಗಿದ್ದಲ್ಲಿ, ಅವರು ಕಾಯಿನನ ಕುರಿತಾದ ಯೆಹೂದ್ಯರ ಕೆಲವು ಊಹಾಪೋಹಗಳಿಗೆ ಪರಿಚಿತರಾಗಿದ್ದರು. ಊಹಾಪೋಹಗಳು ಒಂದು ಬದಿಗೆ, ಆದಿಕಾಂಡದಲ್ಲಿ ಕಾಯಿನನು ದೇವರಿಂದ ಒಡಂಬಡಿಸಲ್ಪಟ್ಟಿರುವದಕ್ಕೆ ಯಾವುದೇ ರೀತಿಯ ಒಲವನ್ನು ಹೊಂದಿರಲಿಲ್ಲ. ಆತನು ಸುಳ್ಳು ಬೋಧಕರಂತೆ ದೇವರ ಪ್ರೋತ್ಸಾಹವನ್ನು ಬದಿಗಿರಿಸಿದನು. ಪ್ರಧಾನ ದೇವದೂತನಾದ ಮಿಕಾಯೇಲನು ಸೈತಾನನ ಮೇಲೆ ದೂಷಣಾಭಿಪ್ರಾಯವನ್ನು ಹೇಳುವದಕ್ಕೆ ಧೈರ್ಯಗೊಳ್ಳಲಿಲ್ಲ (ವಚನ 9). ಯೂದನ ಪತ್ರಿಕೆಯಲ್ಲಿರುವ ವಿರೋಧಿಗಳು ಅಪೊಸ್ತಲರ ಅಧಿಕಾರದ ವಿರುದ್ಧವಾಗಿ ಅಂಕೆಯಿಲ್ಲದೆ ದೂಷಿಸಿದರು ಮಿಕಾಯೇಲನ ಉದಾಹರಣೆಯನ್ನು ಅನುಸರಿಸುವದಕ್ಕೆ ಬದಲಾಗಿ ಅವರು ಕಾಯಿನನ ಮಾರ್ಗದಲ್ಲಿ ಹೋದರು, ಅಹಂಕಾರದಿಂದ ತಮ್ಮದೇ ಮಾರ್ಗವನ್ನು ಅನುಸರಿಸಿದರು, ದೇವರು ಅವರಿಗೆ ನೀಡಿದ ಮಾರ್ಗದರ್ಶನವನ್ನು ತಿರಸ್ಕರಿಸಿದರು. ಕಾಯಿನನ ಉದಾಹರಣೆ ಹಾಗೆಯೇ ತೆಗೆದುಕೊಂಡ ಉದಾಹರಣೆಯಾಗಿ ತೋರಿಬರುವದಿಲ್ಲ. ಯೂದನು ತನ್ನ ವಿರೋಧಿಗಳ ಕುರಿತು ಏನನ್ನು ಹೇಳುತ್ತಾನೋ ಅದಕ್ಕೆ ಈ ಉದಾಹರಣೆಯು ಸರಿಹೊಂದುತ್ತದೆ.

"ಬಿಳಾಮನು" ಬಾಡಿಗಾಗಿ ತೆಗೆದಕೊಂಡ ಪ್ರವಾದಿಯಾಗಿದ್ದನು. ನಾವು ಅವನ ಕುರಿತು ಹೆಚ್ಚಾಗಿ ತಿಳಿದಿದ್ದೇವೆಂದು ನಾವು ಭಾವಿಸುತ್ತೇವೆ. ಅವನನ್ನು ಏನೆಂದು ಕರೆದರು? ಅವನು ಯಾವ ರೀತಿಯ ಮನುಷ್ಯನಾಗಿದ್ದನು? ದೇವರು ಆತನನ್ನು ತನ್ನ ವಾಕ್ಯವನ್ನು ಮಾತನಾಡಲು ಆಯ್ಕೆ ಮಾಡಿಕೊಂಡಿರುವಾಗ ಸಹಜವಾಗಿ ಆತನಲ್ಲಿ ಕೆಲವು ಉತ್ತಮವಾದ ಗುಣಗಳಿದ್ದವು. ಮುಖ್ಯವಾಗಿ, ಬಿಳಾಮನ ಕತೆಯು ಅರಣ್ಯಕಾಂಡ 22-24ರಲ್ಲಿ ಕಂಡುಬರುತ್ತದೆ. ಮೋವಾಬ್ಯರ ಅರಸನು ಆತನನ್ನು ಗಮನಿಸಿದಾಗ ಪ್ರವಾದಿಯು ಪ್ರಭಾವಿತನಾದನು. ಬಾಲಾಕನು ಉತ್ತಮವಾದ ನಿಯೋಗವನ್ನು ಮತ್ತು ದಾರಾಳವಾದ ಕಾಣಿಕೆಯನ್ನು ಕಳುಹಿಸಿದನು. ಪ್ರವಾದಿಯು ಮುರಿದು ಹೋದನು, ಅವನು ಹೋಗಲು ಬಯಸಿದನು, ಆದರೆ ಆತನು ದೇವ ಸೇವಕನಾಗಿದ್ದನು. ದೇವರು ಅವನಿಗೆ "ಹೋಗಬೇಡ" ಎಂದು ಹೇಳಿದನು (ಅರಣ್ಯಕಾಂಡ 22:12).

ಬಹುಶಃ ಬಾಲಾಕನು ಕಳುಹಿಸಿದವರು ಬಿಳಾಮನು ಹೊಯ್ದಾಡಿದರ ಕುರಿತಾಗಿ ಹೇಳಿರಬಹುದು. ಮೋವಾಬ್ಯರ ಅರಸನು ಅವರಿಗಿಂತ ಘನವಂತರಾದ ಹೆಚ್ಚು ಮಂದಿ ಪ್ರಧಾನರನ್ನು ಮತ್ತು ಹೆಚ್ಚು ಹಣವನ್ನು ಕಳುಹಿಸಿದನು. ಬಿಳಾಮನು ಖಂಡಿತವಾಗಿ ಸಂದೇಶ ವಾಹಕರೊಂದಿಗೆ ಹೋಗಲು ಇಚ್ಛಿಸಿದ್ದನು. ಇದರ ಪರಿಣಾಮವಾಗಿ ದೇವರು ಆತನಿಗೆ ಹೇಳಿದನು, "ಎದ್ದು ಅವರ ಜೊತೆಯಲ್ಲಿ ಹೋಗು; ಆದರೆ ನಾನು ನಿನಗೆ ಆಜ್ಞಾಪಿಸುವ ಪ್ರಕಾರವೇ ನೀನು ಮಾಡಬೇಕು ಎಂದು ಹೇಳಿದನು." "ಬಿಳಾಮನ ತಪ್ಪು" ಏನಂದರೆ ದೇವರನ್ನು ಹರಾಜಿನ ಪೆಟ್ಟಿಗೆಯಲ್ಲಿಟ್ಟು ಆತನ ಮಾತುಗಳನ್ನು ಹೆಚ್ಚಿನ ಬೆಲೆಗೆ ಮಾರುವದಕ್ಕೆ ಸ್ವಯಂ ಸಿದ್ಧನಾಗಿರುವದಾಗಿತ್ತು.

ಸಂಗತಿಗಳು ಸಂಭವಿಸಿದಾಗ, ಬಿಳಾಮನು ಇಸ್ರಾಯೇಲರ ಮೇಲೆ ಆಶೀರ್ವಾದವನ್ನು ಪ್ರಕಟಿಸಿದನು, ಶಾಪವನಲ್ಲ, ಆದರೆ ಬಿಳಾಮನು ಒಟ್ಟಾರೆ ವಿಫಲನಾಗಲಿಲ್ಲ. ಬಾಲಾಕನು ತನ್ನ ಹಣದ ಬೆಲೆಯಷ್ಟು ಹೊಂದಿಕೊಂಡನು. ನಂತರ ಮೋಶೆ ಇಸ್ರಾಯೇಲರೊಂದಿಗೆ ಅವರು ಮೋವಾಬ್ಯ ಸ್ತ್ರೀಯರೊಂದಿಗೆ ಮೃದುವಾಗಿ ವರ್ತಿಸಿದ್ದನ್ನು ಹೀಗೆ ಹೇಳಿದನು, "ಪೆಗೋರದ ಬಾಳನ ಸಂಗತಿಯಲ್ಲಿ ಬಿಳಾಮನ ಆಲೋಚನೆಯನ್ನು ಅನುಸರಿಸಿ ಇಸ್ರಾಯೇಲ್ಯರನ್ನು ಯೆಹೋವನಿಗೆ ದ್ರೋಹಿಗಳನ್ನಾಗಿ ಮಾಡಿ ಸಮೂಹದವರಲ್ಲಿ ಘೋರವ್ಯಾದಿಯುಂಟಾಗುವಂತೆ ಮಾಡಿದವರು ಇವರೇ ಅಲ್ಲವೇ" (ಅರಣ್ಯಕಾಂಡ 31:16; ನೋಡಿರಿ ಪ್ರಕಟಣೆ 2:14). ಪಾಪದೆಡೆಗೆ ನಡೆಸುವ ಇಸ್ರಾಯೇಲರ ವಿಷಯಲಂಪಟತೆಯನ್ನು ಹೇಗೆ ಬಲೆಯಲ್ಲಿ ಹಿಡಿಯಬೇಕೆಂದು ಬಿಳಾಮನು ತೋರಿಸಿದ್ದನು. ಬಿಳಾಮನ ಉದಹರಣೆಯು, ಕಾಯಿನನ ಉದಾಹರಣೆಯಂತೆ, ಯೂದನು ಎದುರಿಸಿದ ಸುಳ್ಳು ಬೋಧಕರಿಗೆ ಸಮಂಜಸವಾಗಿದೆ.

ಯೂದನು ಉಲ್ಲೇಖಿಸಿದ ವಯಕ್ತಿಕ ದಂಗೆಯ ಮೂರು ಉದಾಹರಣೆಗಳಲ್ಲಿ, ಪೇತ್ರನು ಸಹ ಉಲ್ಲೇಖಿಸಿದ ಒಂದೇ ಒಂದು ಉದಾಹರಣೆ ಬಿಳಾಮನದಾಗಿದೆ (2 ಪೇತ್ರ 2:15). ಈ ಪ್ರವಾದಿಯು ಯೂದನ ಪತ್ರಿಕೆಯಲ್ಲಿ ಬರುವ ಸುಳ್ಳು ಬೋಧಕರೊಂದಿಗೆ ಎರಡು ಗುಣಲಕ್ಷಣಗಳನ್ನು ಹಂಚಿಕೊಳ್ಳುತ್ತಾನೆ. ಮೊದಲನೆಯದಾಗಿ ಅವನ ಸಮಾಲೋಚನೆಯಿಂದ ಮೋವಾಬ್ಯರು ಇಸ್ರಾಯೇಲರನ್ನು ವಿಷಯಲಂಪಟತೆ ಮತ್ತು ವಿಗ್ರಹಾರಾಧನೆಯ ದುರ್ಮಾಗಕ್ಕೆ ಎಳೆದರು. ಬಿಳಾಮನಂತೆ ಸುಳ್ಳು ಬೋಧಕರು ಜನರನ್ನು ವಿಷಯಲಂಪಟತೆಯ ಮಾರ್ಗದೆಡೆಗೆ ಆಕರ್ಷಿಸಿದರು. ಎರಡನೆಯದಾಗಿ, ಬಿಳಾಮನು ಮೊದಲನೆಯ ಆಸಕ್ತಿ ತನಗೆ ಕೊಟ್ಟಿರುವ ಹಮದ ಮೇಲಿತ್ತು. ಅವನಂತೆ, ಇರುವ ಬೋಧಕರು ದೇವರನ್ನು ಮಹಿಮೆ ಪಡಿಸುವದಕ್ಕಿಂತ ತಮ್ಮ ಸ್ವಪ್ರಯೋಜನದ ಕುರಿತಾಗಿ ಹೆಚ್ಚು ಚಿಂತಿಸುತ್ತಾರೆ. ಪೇತ್ರ ಮತ್ತು ಯೂದ ಇಬ್ಬರು ಬಿಳಾಮನನ್ನು ಬಾಡಿಗೆಗೆ ತೆಗೆದುಕೊಂಡ ಪ್ರವಾದಿ ಎಂದು ಅಪಾದಿಸುತ್ತಾರೆ. ಅದರಂತೆಯೇ, ಸುಳ್ಳು ಬೋಧಕರು ದೇವರ ಜನರನ್ನು ತಮ್ಮ ಸ್ವಪ್ರಯೋಜನಕ್ಕಾಗಿ ದುರುಪಯೋಗಮಾಡಿಕೊಳ್ಳುತ್ತಿದ್ದಾರೆ. ಯೂದನು ಬಿಳಾಮನನ್ನು ಅವಿಧೇಯತೆಯ ಕುರಿತಾಗಿ ಸುಮ್ಮನೆ ತೆಗೆದುಕೊಂಡ ಉದಾಹರಣೆಯಾಗಿ ಪರಿಗಣಿಸಬೇಕೆಂದು ಹೇಳುತ್ತಾನೋ? ಖಂಡಿತವಾಗಿಯೂ ಇಲ್ಲ! ಆತನು ಎದುರಿಸಿದ ಸುಳ್ಳು ಬೋಧಕರು ಬಿಳಾಮನ ಸಂಪ್ರದಾಯವನ್ನು ಅನುಸರಿಸಿದರು.

ಮುಂದೆ ಹೋದ ಹಾಗೆ, ಬಿಳಾಮನನ್ನು ಬಾಡಿಗೆಯ ಬೋಧಕನೆಂದು ದೋಷಾರೋಪಣೆ ಮಾಡುವದು ದೇವರ ರಾಜ್ಯಕ್ಕಾಗಿ ಕಾರ್ಯಮಾಡುವವರಿಗೆ ಭೌತಿಕ ಬೆಂಬಲವನ್ನು ಒದಗಿಸುವದರ ಕುರಿತು ಮಾಡುವ ದೋಷಾರೋಪಣೆಯಲ್ಲ. ಕ್ರಿಸ್ತನ ಕುರಿತು ಉಪದೇಶಿಸಲು ಪೂರ್ಣವಧಿ ಪ್ರಯತ್ನವನ್ನು ಮಾಡುವವರು ಅವರನ್ನು ಗೌರವಿಸುವ ವಿಶ್ವಾಸಿಗಳಿಂದ ಬೆಂಬಲವನ್ನು ಪಡೆದುಕೊಂಡರು ಎಂಬುದು ಹೊಸ ಒಡಂಬಡಿಕೆಯಲ್ಲಿ ಇದು ಸ್ಪಷ್ಟವಾಗಿದೆ (1 ಕೊರಿಂಥ 9:3-14; 1 ತಿಮೊಥೆ 5:17, 18). ಹಾಗೂ ದೇವರ ರಾಜ್ಯದಲ್ಲಿ ಪೂರ್ಣವಧಿ ಸೇವಕರಾಗಿರುವವರು ವಿದ್ಯುತ್ತಿಗೆ ಸಂಬಂಧಿಸಿದ ಕಾಯವಗಳನ್ನು ಮಾಡುವವರು ಅಥವಾ ವೈದ್ಯರಂತೆ ಸಂಬಳಕ್ಕಾಗಿ ಸೇವೆ ಮಾಡುವವರಲ್ಲ. ಒಂದು ವೇಳೆ ಅವರು ಹಾಗೆ ಮಾಡಿದರೆ ಅವರು ಕೇವಲ ಬಾಡಿಗೆಗೆ ಪಡೆದವರು. ಅವರು ಆತನಿಗಾಗಿ ಸೇವೆ ಮಾಡುತ್ತಾರೆ ಮತ್ತು ದೇವರಿಗೆ ಉತ್ತರದಾಯಿಗಳಾಗಿದ್ದಾರೆ.

"ಕೋರಹನು" ಒಬ್ಬ ಲೇವಿಯಾಗಿದ್ದನು ಅವನು ಮೋಶೆ ಮತ್ತು ಆರೋನರಿಗೆ ಕೊಡಲ್ಪಟ್ಟ ಯಾಜಕತ್ವದಲ್ಲಿ ತನಗೆ ಯಾವ ಪಾಲು ಇಲ್ಲ ಎಂದು ಬೇಸರಗೊಂಡಿದ್ದನು. ಅವನ ಕತೆಯು ಅರಣ್ಯಕಾಂಡ 16:1-11ರಲ್ಲಿದೆ. ಕೋರಹನು ಕೆಲವು ಮೈತ್ರಿಕೂಟದವರನ್ನು ಸೇರಿಸಿಕೊಂಡು ಮೋಶೆಯ ನಾಯಕತ್ವಕ್ಕೆ ಸವಾಲನ್ನು ನೀಡಿದನು. ಅವರು ಮೋಶೆ ಆರೋನರಿಗೆ, "ಯೆಹೋವನ ಸಮೂಹದವರಿಗಿಂತಲೂ ನಿಮ್ಮನ್ನು ನೀವೇ ಹೆಚ್ಚಿಸಿಕೊಳ್ಳುವದೇನು ಎಂದು ಹೇಳಿ ದರು" (ಅರಣ್ಯಕಾಂಡ 16:3). ಕೋರಹನು ಕಾಯಿನ ಮತ್ತು ಬಿಳಾಮರಂತೆ ತನ್ನ ಸ್ವಂತ ವೈಭವವದ ಇಚ್ಛೆಯಿಂದಾಗಿ ದೇವರ ವೈಭವವನ್ನು ವಂಚಿಸಲು ಪ್ರಯತ್ನಿಸಿದನು. ಯೂದನ ಮೂರು ಉದಾಹರಣೆಗಳಲ್ಲಿ ಬರುವ ವಿಷಯವೆಂದರೆ ದೇವರ ಮಾರ್ಗಗಳಿಗಿಂತ ತಮ್ಮದೇ ಆದ ಮಾರ್ಗವನ್ನು ಅನುಸರಿಸುವ ಸುಳ್ಳು ಬೋಧಕರನ್ನು ಅವರಲ್ಲಿರುವ ಅಹಂಕಾರ. ಹೆಮ್ಮೆ, ಅಹಂಕಾರ ಮತ್ತು ಸ್ವ-ಇಚ್ಛೆಯಿಂದಾಗ ಕಾಯಿನ, ಬಿಳಾಮ ಮತ್ತು ಕೋರಹನಲ್ಲಿರುವ ನಡತೆಗೆ ವರ್ಗಿಕರಿಸುತ್ತದೆ. ಸುಳ್ಳು ಬೋಧಕರ ಮೇಲೆ ದೇವರ ನ್ಯಾಯತೀರ್ಪು ಎಷ್ಟು ಖಚಿತವಾಗಿತ್ತೆಂದರೆ ಯೂದನು ಹೇಳುತ್ತಾನೆ ಅವರು ಕೋರಹನಂತೆ **ಎದುರು ಮಾತನಾಡಿ** ನಾಶವಾಗಿ ಹೋಗುವವರಾಗಿದ್ದಾರೆ.

**ವಚನ 12.** ಸುಳ್ಳು ಬೋಧಕರು ಅಹಂಕಾರಿಗಳು ಮತ್ತು ಧೈರ್ಯವಂತರು. ಅವರಿಗೆ ದೇವರ ಕುರಿತು ಗೌರವವಿಲ್ಲ, ಅವರು ದೇವರ ನ್ಯಾಯತೀರ್ಪಿನ ಕುರಿತಾಗಿ ಯೋಚಿಸಲಿಲ್ಲ.

ಯೂದನು ಅಘಾತವನ್ನುಂಟು ಮಾಡುವ ರೂಪಕಾಲಂಕಾರಗಳ ಮೂಲಕ ದೋಷಾರೋಪಣೆ ಮಾಡುತ್ತಾನೆ. ಕೆಲವು ರೂಪಕಾಲಂಕಾರಗಳು ಇಂದು ನಾವು ಬಯಸಿರುವದಕ್ಕಿಂತ ಅಷ್ಟೊಂದು ಸ್ಪಷ್ಟವಾಗಿಲ್ಲ. NASB ಆತನನ್ನು ತಿಳಿದಿಕೊಂಡಿರುವಂತೆ, ಯೂದನು ಸುಳ್ಳು ಬೋಧಕರು **ಗುಪ್ತವಾದ ಬಂಡೆಗಳು** ಎಂದು ಹೇಳುತ್ತಾನೆ. NASB ಅನುವಾದದ ಹಿಂದಿರುವ ಗ್ರೀಕ್ *spilas* ಪದ ಕೇವಲ ಹೊಸ ಒಡಂಬಡಿಕೆಯಲ್ಲಿ ಮಾತ್ರ ಕಂಡುಬರುತ್ತದೆ. ಪ್ರಾಚೀನ ಲೇಖಕರು ಇದನ್ನು ಎರಡು ವಿಭಿನ್ನ ಅರ್ಥಗಳಲ್ಲಿ ಉಪಯೋಗಿಸಿದ್ದಾರೆ. ಕೆಲವೊಮ್ಮೆ ಇದು ಭೂಮಿಯ ಮೇಲ್ಮೈ ಹತ್ತಿರದಲ್ಲಿರುವ ದೊಡ್ಡ ಬಂಡೆಯನ್ನು ಆದರೆ ತೆರೆಗಳಿಂದ ಮುಚ್ಚಲ್ಪಟ್ಟ ಬಂಡೆಯನ್ನು ಸೂಚಿಸುತ್ತದೆ ಇನ್ನೊಂದು ರೀತಿಯಲ್ಲಿ ಬಂಡೆಗಳ ಸಾಲು. ಒಂದು ವೇಳೆ ಯೂದನು ಈ ಪದವನ್ನು ಆ ರೀತಿಯಲ್ಲಿ ಉಪಯೋಗಿಸಿದ್ದಲ್ಲಿ, ಅವನು ಸುಳ್ಳು ಬೋಧ ಕರು ಕಪಟಿಗಳಾಗಿದ್ದಾರೆ ಎಂದು ಹೇಳುತ್ತಿದ್ದಾನೆ. ಅವರು ಮಾಡುತ್ತಿರುವ ಅಪಾಯ ಇನ್ನು ಗಂಭೀರ ವಾದದ್ದಾಗಿದೆ ಯಾಕಂದರೆ ಅವರು ತಮ್ಮ ಕೆಟ್ಟತನವನ್ನು ಕಾಣದಂತೆ ಇಡುತ್ತಾರೆ ಅಥವಾ ಅವರು ಅವುಗಳನ್ನು ಭಯಹುಟ್ಟಿಸುವವರುಗಳಲ್ಲ ಎಂದು ತೋರಿಸುವಂತೆ ದಾರಿತಪ್ಪಿಸುತ್ತಾರೆ. ಬಹುಶಃ ಇದನ್ನೆ ಯೂದನು ನಿವೇದಿಸಲು ಬಯಸಿರಬಹುದು. ಹಾಗೂ ಇಲ್ಲಿ ಇನ್ನೊಂದು ಸಾಧ್ಯತೆ ಇದೆ.

ಕೆಲವೊಮ್ಮೆ *spilas* ಎಂದರೆ ಯಾವುದೇ ರೀತಿಯ "ಕಲೆ" ಅಥವಾ "ಕಳಂಕ" ಎಂದು ಅರ್ಥಕೊಡುತ್ತದೆ. KJV, NIV ಮತ್ತು NRSV ಪದವನ್ನು ಈ ರೀತಿಯಲ್ಲಿ ಅರ್ಥಮಾಡಿಕೊಳ್ಳುತ್ತವೆ. "ಗುಪ್ತವಾದ ಬಂಡೆಗಳಿಗೆ" ಬದಲಾಗಿ KJV, "ಇವು ನಿಮ್ಮ ದಾನದ ಔತಣದಲ್ಲಿ ಕಲೆಗಳಾಗಿವೆ" ಎಂದು ಹೇಳುತ್ತದೆ. NIV "ಈ ಜನರು ನಿಮ್ಮ ಪ್ರೇಮ ಭೋಜನಗಳಲ್ಲಿ ಕಳಂಕವಾಗಿದ್ದಾರೆ" ಎಂದು ಅನುವಾದಿಸುತ್ತದೆ. NRSV "ಇವು ನಿಮ್ಮ ಪ್ರೇಮಭೋಜನದಲ್ಲಿ ಕಳಂಕವಾಗಿವೆ" ಎಂದು ಅನುವಾದಿಸುತ್ತದೆ. ಒಂದು ವೇಳೆ ಪದದ ಅರ್ಥವು ಇದಾಗಿದ್ದಲ್ಲಿ, ಯೂದನು ಸುಳ್ಳು ಬೋಧಕರು ಪಿಪಾಯಿಯಲ್ಲಿರುವ ಕೊಳೆತ ಸೇಬಿ ನಂಬಿದ್ದಾರೆ ಎಂದು ಹೇಳುತ್ತಿದ್ದಾನೆ. ಅವರು ಸಭೆಯಲ್ಲಿರುವ ಉತ್ತಮವಾದ ಅನ್ಯೋನ್ಯತೆಯನ್ನು ಕೆಡೆಸುತ್ತಿದ್ದಾರೆ ಮತ್ತು ಕ್ರೈಸ್ತರ ಅನ್ಯೋನ್ಯ ಭೋಜನವನ್ನು ವಿಷಯ ಲಂಪಟತನಕ್ಕೆ ಮತ್ತು ಭಕ್ತಿಹೀನ ಮಾರ್ಗಗಳಿಗೆ ಉಪಯೋಗಿಸುವಂತೆ ಪ್ರೇರೆಪಿಸುತ್ತಾರೆ.

ಪದಗಳ ಎರಡು ಸಂಭವನೀಯ ಅರ್ಥಗಳ ಮಧ್ಯದಲ್ಲಿ ನಿರ್ಧರಿಸಲು ಸನ್ನಿವೇಶ ದಿಂದಾಗಿ ಕಠಿಣವಾಗಿದೆ. ಹಾಗೂ, ಸಮುದ್ರದೊಳಗಿರುವ ಗುಪ್ತ ಬಂಡೆಗಳು ಹಡಗುಗಳನ್ನು ನಾಶಮಾಡುವ ಶಕ್ತಿಯಾಗಿವೆ ಎಂದು ಒಬ್ಬನು ಯೋಚಿಸಿದ್ದಲ್ಲಿ, ಯೂದನು ಎರಡು ವಿಚಾರಗಳನ್ನು ನಿವೇದಿಸಲು ಬಯಸಿರಬಹುದು ಎಂದು ತೋರುತ್ತದೆ. ಆತನು ಉದ್ದೇಶ ಪೂರ್ವಕವಾಗಿ ಸುಳ್ಳು ಬೋಧಕರನ್ನು ಗುಪ್ತವಾದ ಬಂಡೆಗಳು ಮತ್ತು ಕಳಂಕ ಎಂದು ದೂರುವ ಪದವನ್ನು ಉಪಯೋಗಿಸಿರಬಹುದು. ಸುಳ್ಳು ಬೋಧಕರು ತಮ್ಮ ನಿಜವಾದ ನಡತೆಯನ್ನು ಅಡಗಿಸಿಟ್ಟಿರಬಹುದು. ಹೀಗೆ ಮಾಡುವದರಿಂದ ಅವರು ದೇವಜನರ ಗೌರವಕ್ಕೆ ಕಳಂಕವನ್ನು ತಂದಿರಬಹುದು. ಯೂದನ ಓದುಗರು ಸಹಜವಾಗಿ ಅವರು ಏನಾಗಿದ್ದಾರೆ ಎಂಬುದನ್ನು ಗುರುತಿಸಿರಲಿಲ್ಲ ಯಾಕಂದರೆ ಅವರು ತಮ್ಮನ್ನು ತಾವು ತೋರಿಕೆಯ ನಟನೆಯಲ್ಲಿ ಪ್ರದರ್ಶಿಸುತ್ತಿದ್ದರು.

ಕ್ರೈಸ್ತರು ತಮ್ಮ ಅನ್ಯೋನ್ಯ ಭೋಜನದಲ್ಲಿ ಸೇರಿ ಬರುವ ಸಮಯದಲ್ಲಿ ಕ್ರೈಸ್ತತ್ವವು ಅರಳುವದನ್ನು ನಿರೀಕ್ಷಿಸುತ್ತಿದ್ದರು. ಆದಿ ವಿಶ್ವಾಸಿಗಳು ಇದನ್ನು ಪ್ರೇಮಭೋಜನ ಎಂದು ಕರೆಯುತ್ತಿದ್ದರು. ಅದೇ ಸಮಯದಲ್ಲಿ ಕರ್ತನ ಭೋಜನವು **ಪ್ರೇಮ ಭೋಜನಕ್ಕೆ** ಸಮವಾಗಿರಲಿಲ್ಲ ಇವೆರಡರ ಮಧ್ಯದಲ್ಲಿ ಸ್ವಲ್ಪ ಮಟ್ಟಿಗೆ ಹೋಲಿಕೆ ಕಂಡುಬರುತಿತ್ತು. ಕೆಲವೊಂದು ಸಭೆಗಳಲ್ಲಿ ಕ್ರೈಸ್ತರು ಅನ್ಯೋನ್ಯ ಭೋಜನದಲ್ಲಿ ಪಾಲುಗಾರರಾಗುತ್ತಿದ್ದರು ಮತ್ತು ಕರ್ತನ ಭೋಜನವನ್ನು ಆಚರಿಸುತ್ತಿದ್ದರು (1 ಕೊರಿಂಥ 11:17-22; 2 ಪೇತ್ರ

2:13ರಲ್ಲಿರುವ ವಿಮರ್ಶೆಯನ್ನು ನೋಡಿರಿ). ಸುಳ್ಳು ಬೋಧಕರು ಈ ಸಮಯವನ್ನು ತಮ್ಮ ನೀಚ ಸಿದ್ಧಾಂತಗಳನ್ನು ಮುನ್ನಡೆಸಲು ಕ್ರೈಸ್ತ ಅನ್ಯೋನ್ಯತೆಗೆ ಸಮರ್ಪಿಸುತ್ತಿದ್ದರು. ಅವರು ತಮ್ಮ ನಡತೆಯಲ್ಲಿ ನಾಚಿಕೆಗೆಟ್ಟವರಾಗಿದ್ದರು. ಅವರಲ್ಲಿ ದೇವರ ಕುರಿತು ಗೌರವವಿರಲಿಲ್ಲ, ಕ್ರಿಸ್ತನ ದೇಹವನ್ನು ಕಟ್ಟುವದರಲ್ಲಿ ಆಸಕ್ತಿ ಇರಲಿಲ್ಲ. **ಅವರು ನಿಮ್ಮೊಂದಿಗೆ ಭೋಜನದಲ್ಲಿ ಭಾಗಿಯಾಗುತ್ತಾರೆ.** ಯಾವುದೇ ಭಯವಿಲ್ಲದೇ, ತಮ್ಮ ಹಿತವನ್ನು ಮಾತ್ರ ನೋಡಿಕೊಳ್ಳುತ್ತಾರೆ ಎಂದು ಯೂದನು ಹೇಳುತ್ತಾನೆ. ಗ್ರೀಕ್ ಪದವನ್ನು *poimainō* ಕ್ರಿಯಾಪದವನ್ನು NASB ಪೋಷಿಸುವದು ಎಂದು ಅನುವಾದಿಸುತ್ತದೆ. ಇದನ್ನು ಹೆಚ್ಚು ವಾಸ್ತವವಾಗಿ ನೋಡುವಾಗ ಇದರ ಅರ್ಥ "ಕುರುಬನಂತೆ ವರ್ತಿಸುವದು" "ತಮಗಾಗಿ ಚಿಂತಿಸುವದು." NIV ವಾಕ್ಯಭಾಗವನ್ನು "ತಮ್ಮನ್ನು ತಾವು ಪೋಷಿಸಿಕೊಳ್ಳುವ ಕುರುಬರು" ಎಂದು ಅನುವಾದಿಸುತ್ತದೆ.

ದೇವಜನರರನ್ನು ಪೋಷಿಸುವದು ಭಯವನ್ನು ಹುಟ್ಟಿಸುವ ಜವಾಬ್ದಾರಿಯಾಗಿದೆ. ಸೇವಕನ ಸ್ಥಾನಕ್ಕಿಂತ ಹೆಚ್ಚಿನ ಸ್ಥಾನ ದೇವರ ರಾಜ್ಯದಲ್ಲಿ ಇಲ್ಲ ಎಂದು ಯೇಸು ಹೇಳಿದ್ದಾನೆ (ಲೂಕ 22:25, 26). ಒಳ್ಳೇ ಕುರುಬನು ತನ್ನ ಮಂದೆಯನ್ನು ಪೋಷಿಸುತ್ತಾನೆ, ಆದರೆ ಎಲ್ಲಾ ಕುರುಬರು ತಮಗೆ ಕೊಟ್ಟಿರುವ ಸ್ಥಾನವನ್ನು ಸೇವೆ ಮಾಡುವದಕ್ಕೆ ಉಪಯೋಗಿಸುವದಿಲ್ಲ. ಯೂದನು ಎದುರಿಸಿದ ಬೋಧಕರು ಕುರುಬನ ವಸ್ತ್ರವನ್ನು ಧರಿಸುತ್ತಾರೆ, ಆದರೆ ಅವರು ಕುರುಬರಂತೆ ವರ್ತಿಸುವದಿಲ್ಲ. ಇವರು ತಮ್ಮ ಸ್ವಂತ ಹಸಿವನ್ನು ತೃಪ್ತಿಪಡಿಸಲು ತಮ್ಮ ಸ್ಥಾನವನ್ನು ಉಪಯೋಗಿಸುವದಕ್ಕಿಂತ ದೇವರ ಜನರನ್ನು ನಡೆಸುವ ಜವಾಬ್ದಾರಿಯನ್ನು ತಮ್ಮ ಮೇಲೆ ತೆಗೆದುಕೊಳ್ಳುವವರಲ್ಲಿ ಮೊದಲಿಗರಲ್ಲ. ಹಳೆ ಒಡಂಬಡಿಕೆಯಲ್ಲಿ ದೇವರು ಯೆಹೆಜ್ಕೇಲನ ಮೂಲಕ ಹೀಗೆ ಮಾತನಾಡುತ್ತಾನೆ, "ಅಯ್ಯೋ, ನನ್ನ ಕುರಿಗಳು ಕೊಳ್ಳೆಯಾದವು ಕಾಡಿನ ಸಕಲಮೃಗಗಳಿಗೆ ತುತ್ತಾದವು, ಕುರುಬರು ಇರಲಿಲ್ಲವಲ್ಲಾ, ನನ್ನ ಕುರುಬರು ನನ್ನ ಕುರಿಗಳನ್ನು ಹುಡುಕಲಿಲ್ಲವಲ್ಲಾ. ಅವರು ಸ್ವಂತ ಹೊಟ್ಟೆಯನ್ನು ನೋಡಿಕೊಂಡರೇ ಹೊರತು ನನ್ನ ಕುರಿಗಳ ಹೊಟ್ಟೆಯನ್ನು ನೋಡಲೇ ಇಲ್ಲ" (ಯೆಹೆಜ್ಕೇಲ 34:8). ಯೂದನ ಪುಸ್ತಕದಲ್ಲಿರುವ ಸುಳ್ಳು ಬೋಧಕರು ಸಭೆಗೆ ಆತ್ಮೀಕ ಜ್ಞಾನವನ್ನು ನೀಡುತ್ತೇವೆಂದು ಹೇಳುತ್ತಾರೆ, ಆದರೆ ಅವರು ಸಭೆಯನ್ನು ಆತ್ಮೀಕ ಬಲದಿಂದ ಸೋಸಿಬಿಡುತ್ತಾರೆ.

ಅದೇ ಸಮಯದಲ್ಲಿ ಸುಳ್ಳು ಬೋಧಕರು ಆತ್ಮೀಕ ಪೋಷಣೆಯ ವಾಗ್ದಾನವನ್ನು ನೀಡುತ್ತಾರೆ, ನಿಜವಾಗಿಯೂ ಅವರು **ನೀರಿಲ್ಲದ ಮೇಘಗಳಂತೆ** ಮತ್ತು ಹಣ್ಣು ಬಿಡದ ಮರಗಳಂತೆ ಇರುತ್ತಾರೆ. ಪೇತ್ರನಂತೆ ಯೂದನು ಬೋಧಕರ ವಿರುದ್ಧವಾಗಿ ಅಂಕೆಯಿಲ್ಲದ ದುರ್ಭಾಷೆಯನ್ನು ನಿರ್ದೇಶಿಸಿದ್ದಾನೆ. ಇದು ಲೇಖಕನು ವಾಸ್ತವಿಕತೆಯೆಡೆಗೆ ನಡೆದಿದ್ದಾನೆ ಎಂದು ಹೇಳುವದು ಅತಿರೇಕವಾಗುತ್ತದೆ. ಯೂದನು ಅವರ ಸಿದ್ಧಾಂತಗಳ ಬೇರ್ಪಟ್ಟ ವಿಶ್ಲೇಷಣೆಯನ್ನು ನೀಡುವದರಲ್ಲಿ ಆಸಕ್ತನಾಗಿಲ್ಲ. ಬದಲಾಗಿ ಆತನು ಅವರ ಮೇಲೆ ವಯಕ್ತಿಕವಾಗಿ ನೇರವಾಗಿ ಆಕ್ರಮಣವನ್ನು ಮಾಡುತ್ತಾನೆ. ಅವರು ಯಾರಿಗೆ ಏನನ್ನು ಬೋಧಿಸಿದರು ಎನ್ನುವದರ ಕುರಿತು. ಯೂದನ ಪ್ರತಿಯೊಂದು ರೂಪಕಾಲಂಕಾರಗಳು, ವೈವಿಧ್ಯಮಯ ಮತ್ತು ಶ್ರೀಮಂತಿಕೆಯಿಂದ ಕೂಡಿವೆ ಮತ್ತು ಅವರು ಇದ್ದಂದತೆಯೇ "ಈ ಜನರ" ಚಿತ್ರಣವನ್ನು ಚಿತ್ರಿಸಲು ಕೊಡುಗೆಯನ್ನು ನೀಡುತ್ತವೆ.

ಮೊದಲನೆಯದಾಗಿ, ಅವರು ತಾವು ಏನನ್ನು ವಾಗ್ದಾನ ಮಾಡುತ್ತಾರೋ ಅದನ್ನು ನೀಡುವದಿಲ್ಲ ಅವರು "ನೀರಿಲ್ಲದ ಮೇಘಗಳಂತೆ" ಇದ್ದಾರೆ. ಕಾನಾನ ದೇಶದ ಶುಷ್ಕವಾತಾವರಣದಲ್ಲಿ ನೀರು ಅನೇಕಾವರ್ತಿ ವಿರಳವಾದ ವಸ್ತುವಾಗಿತ್ತು. ಮೆಡಿಲೇರಿಯನ್ ಪ್ರದೇಶದಿಂದ ಪಶ್ಚಿಮದ ಗಾಳಿಯು ದೇಶದ ಮೇಲೆ ಬೀಸುವಾಗ ವಾತಾರಣ ತಂಪಾಗುತ್ತಿತ್ತು. ಕೆಲವೊಮ್ಮೆ ಕಪ್ಪಾದ ಮೋಡಗಳು ರಚಿಸಲ್ಪಡುತ್ತಿದ್ದವು ಮತ್ತು ಅನಿಷ್ಟಕರವಾಗಿರುತ್ತಿದ್ದವು. ದಿನದ ಬಿಸಿಲು ಏರುತ್ತಾ ಹೋದಹಾಗೆ, ಅವರು ಅನೇಕಾವರ್ತಿ ಚದುರಿಹೋಗಿ, ದೇಶವನ್ನು ಮಳೆಯಿಂದ ವಂಚಿಸುತ್ತಿದ್ದವು. ಮಳೆಯ ವಾಗ್ದಾನವನ್ನು ಹೊಂದಿ ದೇಶಕ್ಕೆ ಪರಿಹಾರವನ್ನು

ನಿರೀಕ್ಷಿಸುವಂತೆ ಮಾಡಿ ಕೇವಲ ಕಷ್ಟವನ್ನು ಹೆಚ್ಚಿಸುತ್ತಿದ್ದವು. ಸುಳ್ಳು ಬೋಧಕರಲ್ಲಿ ಸಭೆಗೆ ಏನನ್ನೂ ನೀಡಲಿಕ್ಕೆ ಇರುವದಿಲ್ಲ. ಅವರಲ್ಲಿ ಕೇವಲ ಮಾತುಗಳಿರುತ್ತಿದ್ದವು, ಪಾಪದಿಂದ ಪರಿಹಾರ ನೀಡುವ, ದೇವರೊಂದಿಗೆ ಸಮಾಧಾನವನ್ನು ಹೊಂದುವ, ಬರಲಿಕ್ಕಿರುವ ಜೀವಿತದ ಕುರಿತಾದ ಮಾತುಗಳು ಮಾತ್ರ, ಆದರೆ ಫಲಿತಾಂಶ ಮಾತ್ರ ಏನೂ ಇರಲಿಲ್ಲ. ಕೊನೆಯಲ್ಲಿ, ಅವರಿಂದ ಯಾವ ಉತ್ತಮ ಕಾರ್ಯಗಳು ಆಗುವದಿಲ್ಲ. ಯಾರ್ಯಾರು ಅವರನ್ನು ಆಲಿಸಿದರೋ ಅವರು ತಮ್ಮನ್ನು ತಾವು ದೇವರಿಂದ ದೂರಹೋದ ಅನುಭವವನ್ನು ಹೊಂದಿದರೇ ಹೊರತು ಸಮೀಪಸಿದ ಅನುಭವವನ್ನಲ್ಲ.

ಸುಳ್ಳು ಬೋಧಕರು ದೇವಾಲಯದಲ್ಲಿ ಎಲ್ಲದಕ್ಕಿಂತ ಹೆಚ್ಚು ಅಪಾಯವನ್ನು ಪ್ರದರ್ಶಿಸಿದರು ಅಲ್ಲಿ ಬದಲಾಯಿಸಲು ಮತ್ತು ಅನುಕೂಲಗೊಳಿಸಲು ಅರ್ಹರಾಗಿದ್ದರು. ತಮ್ಮ ರಚನೆಯನ್ನು ಉಪಯೋಗಿಸಲು ತಮ್ಮ ಸಂದೇಶವನ್ನು ಅವಶ್ಯವಿರುವ ರೀತಿಯಲ್ಲಿ ಬಾಗಿಸಿಕೊಳ್ಳುತ್ತಿದ್ದರು. **ಅವರು ಗಾಳಿಯಿಂದ ಹೊಡೆಸಿಕೊಂಡು ಹೋಗುವವರಾಗಿದ್ದರು.** ಇಲ್ಲಿ ವಿಷಯವೆಂದರೆ ಅವರು ತಮ್ಮಿದಾಚೆಗೆ ಇರುವ ಶಕ್ತಿಗಳಿಗೆ ಅಧೀನರಾಗುತ್ತಿದ್ದರು.

ಯೂದನು ಸುಳ್ಳುಬೋಧಕರ ವಿರುದ್ಧ ತನ್ನ ತೀರ್ವವಾದ ಖಂಡನೆಯನ್ನು ಮೂರು ರೂಪಕಾಲಂಕಾರಗಳ ಮೂಲಕ ಮುಂದುವರೆಸುತ್ತಾನೆ. **ಅವು ಹಣ್ಣು ಬಿಡದ ಮರಗಳು,** ಅದಷ್ಟೇ ಸಾಲದಾಗಿದ್ದಲ್ಲಿ ಅವರು ಒಣಗಿ **ಸತ್ತು ಹೋದ ಮರಗಳು.** ಮರಗಳ ರೂಪಕಾಲಂಕಾರಕ್ಕೆ ತಿರುಗಿ ಬರುವದಾದರೆ, ಆತನು ಅವರು **ಬೇರು ಸಹಿತ ಕಿತ್ತುಬಿದ್ದ** ಮರಗಳು, ಯೋಗ್ಯವಾದ ಏನನ್ನೂ ನೀಡಲು ಅಸಮರ್ಥವಾದ ಮರಗಳು ಎಂದು ಹೇಳು ತ್ತಾನೆ. NASB ಮತ್ತು NRSV "ಹಣ್ಣು ಬಿಡದೆ" ಇರುವ ಎಂಬ ಪದವನ್ನು "ಶರತ್ಕಾಲದ ಮರಗಳಿಗೆ" ಹೋಲಿಕೆಯಾಗಿ ತೆಗೆದುಕೊಳ್ಳುತ್ತವೆ. KJV ಅಲ್ಪ ವಿರಾಮವನ್ನು ಉಪಯೋಗಿಸಿ ಮೂರು ರೂಪಕಾಲಂಕಾರಗಳಿಗೆ ಬದಲಾಗಿ ನಾಲ್ಕು ರೂಪಕಾಲಂಕಾರಗಳನ್ನು ಸೂಚಿಸುತ್ತದೆ. ಅದು ಹೀಗೆ ಹೇಳುತ್ತದೆ, "ಹಣ್ಣುಗಳನ್ನು ಬಿಡದೆ ಒಣಗಿ ಹೋಗುವ ಮರಗಳು, ಬೇರು ಸಹಿತ ಕಿತ್ತು ಬಿದ್ದ ಮರಗಳು." NIV "ಹಣ್ಣುಗಳು ಬಿಡದೆ" ಎಂಬುದನ್ನು ಬೇರು ಸಹಿತ ಕಿತ್ತು ಬಿದ್ದ ಮರಗಳನ್ನು ವರ್ಣಿಸಲು ಉಪಯೋಗಿಸುತ್ತದೆ. ಅದು "ಹಣ್ಣು ಬಿಡದಿರುವ ಮತ್ತು ಬೇರು ಸಹಿತ ಕಿತ್ತು ಬಿದ್ದ ಶರತ್ಕಾಲದ ಮರಗಳನ್ನು ಹೊಂದಿದೆ - ಎರಡು ಸಾರಿ ಸತ್ತು ಹೋಗು ವಂತೆ." ಅನುವಾದವು ಸ್ವಲ್ಪ ಮಟ್ಟಿಗೆ ಅರ್ಥದಲ್ಲಿ ವ್ಯತ್ಯಾಸವನ್ನು, ಆದರೆ ಅರ್ಥ ಎಲ್ಲದರಲ್ಲಿ ಸ್ಪಷ್ಟವಾಗಿದೆ. ಸುಳ್ಳು ಬೋಧಕರು ತಮಗೆ ಏನನ್ನು ಉತ್ಪಾದಿಸಲಾಗುವದಿಲ್ಲವೋ ಅದನ್ನು ವಾಗ್ದಾನ ಮಾಡುತ್ತಾರೆ.

ಒಬ್ಬನು ಸುಗ್ಗಿಯನ್ನು ಅಪೇಕ್ಷಿಸಿ ಹಣ್ಣಿನ ಮರಗಳನ್ನು ನೆಡುತ್ತಾನೆ. ಇಸ್ರಾಯೇಲ್ಯರಿಗೆ ವಿರುದ್ಧವಾಗಿ ದೇವರಿಗೆ ಇರುವ ಒಂದು ದೂರು ಏನೆಂದರೆ ಜನರು ಭಕ್ತಿಯ ಯಾವುದೇ ಫಲವನ್ನು ಉತ್ಪಾದಿಸುವದಿಲ್ಲ ಎಂಬುವಂತದ್ದು. ಯೆಶಾಯನು ದ್ರಾಕ್ಷೇ ತೋಟದ ಸಾಮ್ಯವನ್ನು ಉಪಯೋಗಿಸುತ್ತಾನೆ, ಆದರೆ ವಿಷಯ ಒಂದೇ ಆಗಿದೆ. ಪ್ರವಾದಿಯು ದೇವರು ಹೇಗೆ ಬೆಳೆಸಿದ್ದಾನೆ, ಗೊಬ್ಬರಹಾಕಿದ್ದಾನೆ ಮತ್ತು ದ್ರಾಕ್ಷೇ ತೋಟವನ್ನು ಹೇಗೆ ಸಂರಕ್ಷಿಸಿದ್ದಾನೆ ಎಂಬುದನ್ನು ವರ್ಣಿಸುತ್ತಾನೆ. "ತೋಟವು (ಒಳ್ಳೇ) ದ್ರಾಕ್ಷೆಯ ಹಣ್ಣನ್ನು ಕೊಡುವದೆಂದು ಎದುರುನೋಡುತ್ತಿರಲು ಅದು ಹೊಲಸು ಹಣ್ಣನ್ನು ಬಿಟ್ಟಿತು" (ಯೆಶಾಯ 5:2ಬಿ). ಅದರ ಪರಿಣಾಮವಾಗಿ ದೇವರು ತೀರ್ಪನ್ನು ಪ್ರಕಟಿಸಿದನು, "ಅದರ ಗೋಡೆಯನ್ನು ಕೆಡವಿಹಾಕುವೆನು. ಅದು ತುಳಿದಾಟಕ್ಕೆ ಈಡಾಗುವದು" (ಯೆಶಾಯ 5:5ಬಿ). ಪ್ರವಾದನೆಗಳಲ್ಲಿ ಈ ಸಾಮ್ಯವು ಸಾಮ್ಯಾವಾಗಿದೆ (ಯೆರೆಮೀಯ 2:21; 12:10; ಯೆಹೆಜ್ಕೇಲ 19:10-14; ಹೋಶೆಯ 10:1). ಯೇಸು ಸಹ ಇದೇ ಭಾಷಾಲಂಕಾರವನ್ನು ಉಪಯೋಗಿಸುತ್ತಾನೆ (ಮತ್ತಾಯ 21:33-41). ಪೇತ್ರನು ಸುಳ್ಳುಬೋಧಕರನ್ನು ಇದೇ ರೀತಿಯ ಸಾಮ್ಯದಿಂದ ವರ್ಣಿಸುತ್ತಾನೆ, ಮತ್ತು ಆತನ ವಿಷಯವು ಅದೇ ಆಗಿದೆ. ಪೇತ್ರನಿಗೆ ಅವರು "ನೀರಿಲ್ಲದ

ಬಾವಿಗಳಾಗಿದ್ದಾರೆ ಮತ್ತು ಬಿರುಗಾಳಿಯಿಂದ ಬಿಡಿಸಿಕೊಂಡು ಹಾರಿಹೋಗುವ ಮಂಜು ಆಗಿದ್ದಾರೆ" (2 ಪೇತ್ರ 2:17).

ಯೂದನು ಸುಳ್ಳುಬೋಧಕರು "ಎರಡು ರೀತಿಯಲ್ಲಿ ಸತ್ತವರಾಗಿದ್ದಾರೆ" ಎಂದು ಹೇಳುವಾಗ ಆತನು ಎಲ್ಲಾ ಸಂದೇಹವನ್ನು ತೆಗೆದುಹಾಕುವವನಾಗಿದ್ದಾನೆ. ಅವರು ತಮ್ಮ ವಿಷಪೂರಿತ ಸಿದ್ಧಾಂತದೊಂದಿಗೆ ಪೋಷಣೆಯನ್ನು ನೀಡುವ ಯಾವ ಹಣ್ಣನ್ನು ನೀಡಲಿಲ್ಲ. ಅವರು ಪುನರುಜ್ಜೀವಿಸಲು ಕಾಯ್ದಿರುವ ಎಳೆಸಸಿಗಳಂತಲ್ಲ. ಜೀವವೆಲ್ಲಾ ಹೋಯಿತು. ಅವುಗಳು ಬಹು ಹಿಂದೆಯೇ ಬೇರು ಸಹಿತ ಕಿತ್ತು ಹಾಕಲ್ಪಟ್ಟವು. ಯೂದನ ಓದುಗರು ಅವರಿಂದ ತಿರುಗಿಕೊಂಡು ಉತ್ತಮವಾದದ್ದನ್ನು ಮಾಡಿದ್ದಾರೆ. ಅಲ್ಲಿ ಹೊಂದಾಣಿಕೆಗೆ ಸ್ಥಳವಿಲ್ಲ.

**ವಚನ 13.** ಯಾಕೋಬನಂತೆ ಯೂದನು ಸಹ ತಮ್ಮ ಜೀವಿತದಲ್ಲಿ ದೇವರ ಮಾರ್ಗದರ್ಶನವನ್ನು ತಿರಸ್ಕರಿಸಿದವರನ್ನು ಗಾಳಿಯಿಂದ ಬಡೆಯಲ್ಪಟ್ಟ ಸಮುದ್ರದ ತೆರೆಗಳಿಗೆ ಹೋಲಿಸುತ್ತಾನೆ (ಯಾಕೋಬ 1:6). ಅವರಿಂದ ಏನನ್ನು ನಿರೀಕ್ಷಿಸಬೇಕು ಎಂಬುದನ್ನು ಯಾರು ತಿಳಿಯರು. ಅವರನ್ನು ಅವಲಂಭಿಸುವದು ಸಾಧ್ಯವಿಲ್ಲ. ಅವರು ಅಸ್ಥಿರ ಮತ್ತು ಊಹಿಸಿಕೊಳ್ಳಲು ಅಸಾಧ್ಯವಾಗಿರುವದಷ್ಟೇ ಅಲ್ಲ, ಅವರು ಮನುಷ್ಯರನ್ನು ದೇವರಿಂದ ದೂರವಾಗಿಸುತ್ತಾರೆ. ಅವರು **ಎಲೆಯುವ ನಕ್ಷತ್ರಗಳಂತಿರುತ್ತಾರೆ.** "ನಕ್ಷತ್ರಗಳು" ಎಂಬ ಆಂಗ್ಲ ಪದವು "ಅಲೆಯುವ" (ನಕ್ಷತ್ರಗಳು) ಎಂಬ ಗ್ರೀಕ್ ಪದದಿಂದ ತೆಗೆದುಕೊಳ್ಳಲಾಗಿದೆ. ಅಲೆಯುವ ನಕ್ಷತ್ರಗಳು ಸ್ಥಿರವಾದ ನಕ್ಷತ್ರಗಳಂತಲ್ಲ ಅವು ತಮ್ಮನ್ನು ಅವಲಂಭಿಸಿದವರನ್ನು ಮಾರ್ಗತಪ್ಪಿಸುತ್ತವೆ. ಸುಳ್ಳು ಬೋಧಕರಿಗೆ **ಕಾರ್ಗತ್ತಲೆಯೂ** ಸದಾಕಾಲಕ್ಕೂ ಇಟ್ಟಿರುವದು, ಅದೇ ಸಮಯದಲ್ಲಿ ಅವರು ನಿತ್ಯವಾದ ಅಗ್ನಿಯ ದಂಡನೆಯನ್ನು ಅನುಭವಿಸುತ್ತಾರೆ (ವಚನ 7).

## ಭಕ್ತಿಹೀನ ಮನುಷ್ಯರ ನ್ಯಾಯತೀರ್ಪಿನ ಕುರಿತು ಹನೋಕ ಪ್ರವಾದನೆ (14-16)

**14ಇಂಥವರ ವಿಷಯದಲ್ಲೇ ಆದಾಮನಿಗೆ ಏಳನೆಯ ತಲೆಯವನಾದ ಹನೋಕನು. ಇಗೋ ಕರ್ತನು ಲಕ್ಷಾಂತರ ಪರಿಶುದ್ಧದೂತರನ್ನು ಕೂಡಿಕೊಂಡು 15ಎಲ್ಲರಿಗೆ ನ್ಯಾಯತೀರಿಸುವದಕ್ಕೂ ಭಕ್ತಿಹೀನರೆಲ್ಲರು ಮಾಡಿದ ಭಕ್ತಿಯಿಲ್ಲದ ಎಲ್ಲಾ ಕೃತ್ಯಗಳ ವಿಷಯವಾಗಿ ಮತ್ತು ಭಕ್ತಿಯಿಲ್ಲದ ಪಾಪಿಷ್ಟರು ತನ್ನ ಮೇಲೆ ಹೇಳಿದ ಎಲ್ಲಾ ಕಠಿಣವಾದ ಮಾತುಗಳ ವಿಷಯವಾಗಿ ಅವರನ್ನು ಖಂಡಿಸುವದಕ್ಕೂ ಬಂದನು ಎಂಬುದಾಗಿ ಪ್ರವಾದಿಸಿದನು. 16ಇವರು ಗುಣುಗುಟ್ಟುವವರು ತಮ್ಮ ಗತಿಯನ್ನು ನಿಂದಿಸುವವರೂ ಆಗಿದ್ದಂತೆ ಇವರ ಬಾಯಿಂದ ದೊಡ್ಡ ದೊಡ್ಡ ಮಾತುಗಳು ಬರುತ್ತವೆ.**

**ವಚನಗಳು 14, 15.** ಯೂದನು, **ಇಗೋ ಕರ್ತನು ಲಕ್ಷಾಂತರ ಪರಿಶುದ್ಧದೂತರನ್ನು ಕೂಡಿಕೊಂಡು ಎಲ್ಲರಿಗೆ ನ್ಯಾಯತೀರಿಸುವದಕ್ಕೆ ಬರುವಾಗ** ಎಂದು ಬರೆಯುವಾಗ ಆತನು 1 ಹನೋಕನ ಪುಸ್ತಕದಲ್ಲಿ ಸಾಮಾನ್ಯವಾಗಿ ಉಲ್ಲೇಖಿಸಿದ ಕಲ್ಪಿತ ಕಾರ್ಯಗಳನ್ನು ಸೂಚಿಸುತ್ತಿದ್ದಾನೆ, ಯೂದನು ಆ ಪುಸ್ತಕದಲ್ಲಿ 1:9ರಲ್ಲಿ ಬರೆದಿರುವದನ್ನು ಸೂಚಿಸುತ್ತಾನೆ. "ಇಗೋ, ಆತನು ಹತ್ತು ಲಕ್ಷ ಪರಿಶುದ್ಧರೊಂದಿಗೆ ಎಲ್ಲರಿಗೂ ನ್ಯಾಯತೀರ್ಪನ್ನು ನೀಡುವದಕ್ಕಾಗಿ ಬರುತ್ತಾನೆ."[11] ಹನೋಕನ ಮೊದಲನೆಯ ಪುಸ್ತಕ ಶತಮಾನಗಳಿಂದ ಕೂಲಂಕಶವಾಗಿ ಅಧ್ಯಯನ ಮಾಡುವ ಪುಸ್ತಕವೆಂದು ಜನಪ್ರಿಯವಾಗಿದೆ. ಈ ಪುಸ್ತಕವು ಕ್ರಿಸ್ತನಿಗಿಂತ ಮೊದಲು ಮತ್ತು ನಂತರದ ಮೊದಲಿನ ಶತಮಾನಗಳಲ್ಲಿ ಹಂತಹಂತವಾಗಿ ಸಂಯೋಜಿಸಲ್ಪಟ್ಟಿದೆ ಎಂದು ಪಂಡಿತರ ಒಮ್ಮತದ ಅಭಿಪ್ರಾಯವನ್ನು ಹೊಂದಿದೆ. 1 ಹನೋಕನ ಪುಸ್ತಕವನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿದವರು ಯೂದನು ಸೂಚಿಸಿದ ಭಾಗವು ಆದಿ ಕ್ರೈಸ್ತ - ಪೂರ್ವ ಅವಧಿಯಲ್ಲಿ ಬರೆಯಲ್ಪಟ್ಟಿದೆ ಎಂದು

ನಂಬುತ್ತಾರೆ.

ಅವರಲ್ಲಿ ಕೆಲವರು ಯೂದನು ಸೂಚಿಸಿದ 1 ಹನೋಕನ ಪುಸ್ತರ, "ಹನೋಕನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾ ಇರುವಾಗ ದೇವರು ಅವನನ್ನು ಕರೆದುಕೊಂಡದ್ದರಿಂದ ಕಾಣದೆ ಹೋದನು" (ಆದಿಕಾಂಡ 5:24) ಎಂದು ಯಾವ ಮನುಷ್ಯನ ಕುರಿತಾಗಿ ಹೇಳಿದೆಯೋ ಆ ಮನುಷ್ಯನು ಬರೆದಿದ್ದಾನೆ ಎಂದು ಹೇಳಲಾಗುತ್ತದೆ. **ಆದಾಮನಿಗೆ ಏಳನೆಯ ತಲೆಯವನಾದ ಹನೋಕನು** ಎಂಬುದು ವಿಶಿಷ್ಟವಾಗಿದೆ. ಆದಿಕಾಂಡ 5ರಲ್ಲಿರುವ ವಂಶಾವಳಿ ಆದಾಮನಿಂದ ಪ್ರಾರಂಭವಾಗುತ್ತದೆ ಮತ್ತು ಹನೋಕನು ಏಳನೇ ಸ್ಥಾನದಲ್ಲಿದ್ದಾನೆ. "ಆದಾಮನಿಂದ ಏಳನೇ ತಲೆಮಾರಿನವನು" ಎಂಬ ಸ್ಥಾನ ಎಂಬುದು 1 ಹನೋಕನ ಪುಸ್ತಕದಲ್ಲಿ ಸಹ ಕಂಡುಬರುತ್ತದೆ.[12]

ಅದೇ ಸಮಯದಲ್ಲಿ ಯೆಹೂದ್ಯರಾಗಲಿ ಅಥವಾ ಕ್ರೈಸ್ತರಾಗಲಿ, ಕೆಲವು ಅಪವಾದಗಳೊಂದಿಗೆ ಸ್ವೀಕರಿಸಲ್ಪಟ್ಟಿವೆ. ಗ್ರಂಥದ ಭಾಗವಾಗಿ 1 ಹನೋಕನ ಪುಸ್ತಕ ಕೆಲವೊಂದು ವೃತ್ತಗಳಲ್ಲಿ ಬಹಳವಾದ ಗೌರವಕ್ಕೆ ಪಾತ್ರವಾಗಿದೆ. ಯೂದನು 1 ಹನೋಕನ ಪುಸ್ತಕವನ್ನು "ವಾಕ್ಯಭಾಗ" ಎಂದು ಕರೆಯುವದಿಲ್ಲ ಆದರೆ ಆತನು ಇತರ ಲೇಖಕರು ಹೊಸ ಒಡಂಬಡಿಕೆಯ ಪುಸ್ತಕಗಳನ್ನು ಉಲ್ಲೇಖಿಸಿದಂತೆ ಇದನ್ನು ಉಲ್ಲೇಖಿಸಿರುವಂತೆ ತೋರಿ ಬರುತ್ತದೆ. ಆತನು ಪೌಲನು ಯೆಶಾಯನ ಮಾತುಗಳನ್ನು ಉಪಯೋಗಿಸಿದಂತೆ ಹನೋಕನ ಮಾತುಗಳನ್ನು ಉಪಯೋಗಿಸಿದ್ದಾನೆ. ಯೂದನು ಆದಿಕಾಂಡ 5:21-24ರಲ್ಲಿರುವ ಹನೋಕನನ್ನು ಉಲ್ಲೇಖಿಸುತ್ತಿದ್ದಾನೆ ಎಂಬುದರಲ್ಲಿ ಸಂಶಯವಿಲ್ಲ.

ಹೊಸ ಒಡಂಬಡಿಕೆಯ ಲೇಖಕರು ಪವಿತ್ರಾತ್ಮನ ಪ್ರೇರೆಪಣೆ ಮತ್ತು ಅಧಿಕಾರದೊಂದಿಗೆ ಬರೆದರು ಎಂದು ನಂಬುವವರಿಗೆ ಯಾದನು 1 ಹನೋಕನ ಪುಸ್ತಕದಿಂದ ಉಲ್ಲೇಖಿಸಿರುವದು ಮತ್ತು ಪುಸ್ತಕವು ಪ್ರೇರೇಪಿಸಲ್ಪಟ್ಟದ್ದು ಮತ್ತು ನಿಜವಾದದ್ದು ಎಂದು ದೃಢೀಕರಿಸುವದಕ್ಕೆ ಸಮಸ್ಯೆಯನ್ನು ಉಂಟುಮಾಡುತ್ತದೆ. ಇದು ನಿಜವಾದದ್ದು ಯಾಕಂದರೆ ಇದು ದೇವರಿಂದ ಪ್ರೇರೇಪಿಸಲ್ಪಟ್ಟದ್ದು, ದೇವರು ಸತ್ಯವಾಗಿದ್ದಾನೆ. ಆದಾಗ್ಯೂ, ಈ ವಿಷಯದಲ್ಲಿ ಯೂದನು ಹನೋಕನಿಗೆ ಉಪಯೋಗಿಸಿದ ಪದಗಳು, ಹನೋಕನು ಬರೆದಿರುವ ಪುಸ್ತಕದಿಂದ ಬಂದಿರುವಂತೆ ತೋರುವದಿಲ್ಲ, ಕನಿಷ್ಟ "ಆದಾಮನಿಂದ ಏಳನೇ ತಲೆಮಾರಿನ" ಹನೋಕನಿಂದಲ್ಲ. ಈ ಹೇಳಿಕೆಯ ಕುರಿತು ವಿಶ್ವಾಸಿಗಳಿಂದ ಮತ್ತು ಅವಿಶ್ವಾಸಿಗಳಿಂದ ಅನೇಕ ಪ್ರಶ್ನೆಗಳು ಉದ್ಭವಿಸಬಹುದು: ಆದಾಮನಿಂದ ಏಳನೇ ತಲೆಮಾರಿನವನಾದ ಹನೋಕನಿಂದ ನಿಜವಾಗಿಯೂ ಈ ಪುಸ್ತಕವು ಬರೆಯಲ್ಪಟ್ಟಿದೆ ಎಂದು ಯೂದನು ನಂಬುತ್ತಾನೋ? ಕ್ರೈಸ್ತ ಮತ್ತು ಯೆಹೂದ್ಯ ಪಂಡಿತರು ಯೇಸುವಿನ ಜನನಕ್ಕಿಂತ ಮೊದಲು ಮತ್ತು ನಂತರದ ದಿನಗಳಲ್ಲಿ ಪುಸ್ತಕವು ಬರೆಯಲ್ಪಟ್ಟಿದೆ ಎಂದು ಒಪ್ಪುತ್ತಾರೋ? ಯೂದನು ಹನೋಕನ ಗುಣಧರ್ಮದ ಕುರಿತು ಹೇಳಿದ ಪದಗಳನ್ನು ನಾವು 1 ಹನೋಕ ಎಂದು ಕರೆಯುವ ಪುಸ್ತಕದಿಂದ ತೆಗೆದುಕೊಂಡಿದ್ದಾನೆಂಬುದನ್ನು ಅಲ್ಲಗಳೆಯುವದು ಪ್ರಶಂಸನೀಯವಾಗಿದೆಯೋ? 1 ಹನೋಕನ ಪುಸ್ತಕದಲ್ಲಿರುವದನ್ನು ಯೂದನು ದೈವೀಪ್ರೇರಣೆಯಿಂದ ಸೂಚಿಸಿರುವದರ ಪರಿಣಾಮವೇನಾಗಿರಬಹುದು? ಕ್ರೈಸ್ತರು ಎರಡು ಕಾರಣಗಳಿಂದಾಗಿ ಈ ಪ್ರಶ್ನೆಗಳ ಒಪ್ಪಂದದಲ್ಲಿ ಹೋರಾಡುತ್ತಾರೆ: (1) ಕ್ರೈಸ್ತರು ವಾಕ್ಯಭಾಗವು ದೈವಪ್ರೇರಿತವಾದದ್ದು ಎಂದು ಹೇಳುವಾಗ ಇದು ಸಮಗ್ರತೆಯ ವಿಷಯವಾಗಿದೆ, ಅವರು ದೈವೀ ಪ್ರೇರಣೆಯ ತಮ್ಮ ತಿಳುವಳಿಕೆಯನ್ನು ಯೂದನು ಬರೆದಿರುವ ವಿಷಯದೊಂದಿಗೆ ಸಮರಸಗೊಳಿಸಬೇಕಾಗಿದೆ. (2) ಇದು ಸಾಕ್ಷಿಯ ವಿಷಯವಾಗಿದೆ. ಕ್ರೈಸ್ತರು ಯಾವುದೇ ಮನುಷ್ಯರಿಗೆ ಉತ್ತರವನ್ನು ಒದಗಿಸಬೇಕಾಗಿದೆ ಆತನು ವಿಶ್ವಾಸಿಯಾಗಿರಲಿ ಅಥವಾ ಅವಿಶ್ವಾಸಿಯಾಗಲಿ - ಅವನು ತನ್ನೊಳಗೆ ಇಟ್ಟುಕೊಂಡಿರುವ ನಿರೀಕ್ಷೆಗೆ ಕಾರಣ ನೀಡಬೇಕಾಗಿದೆ.

ಯೂದನು ಉಲ್ಲೇಖಿಸಿರುವ ಹನೋಕನು ಸತ್ಯವೇದವು ಬಾಯಿಮಾತಿನ

ದೈವೀಪ್ರೇರಣೆಯನ್ನು ಹೊಂದಿದೆ ಎಂದು ನಂಬುವಂತೆ ನಮಗೆ ಸಮಸ್ಯೆಯನ್ನು ತರುವಾಗ, ಅದು ನಿವಾರಿಸಲಾಗದ ಸಮಸ್ಯೆಯೇನಲ್ಲ. 1 ಹನೋಕನ ಪುಸ್ತಕವು "ಪವಿತ್ರಾತ್ಮ ಪ್ರೇರಿತರಾದ ಮನುಷ್ಯರಿಂದ" (2 ಪೇತ್ರ 1:21) ಬರೆಯಲ್ಪಟ್ಟಿದೆ ಎಂಬುದಾಗಿ ಯಾವ ಸೂಚನೆಯೂ ಇಲ್ಲ. ತಾನು ಉಲ್ಲೇಖಿಸಿದ ಪದಗಳು ವಾಕ್ಯಭಾಗದಿಂದ ಬಂದವುಗಳು ಎಂದು ಯೂದನು ಹೇಳುವದಿಲ್ಲ. ಕೇವಲ ಉಲ್ಲೇಖಿಸಿರುವದು ಲೇಖಕನು ಅವು ವಾಕ್ಯಭಾಗದ ಪದಗಳಾಗಿವೆ ಎಂದು ಸೂಚಿಸುತ್ತಾನೆ ಎಂದು ಹೇಳುವ ಅವಶ್ಯಕತೆಯಿಲ್ಲ. ಉದಾಹರಣೆಗೆ ಪೌಲನು, ತನ್ನ ವಿಷಯವನ್ನು ಮಂಡಿಸುವದಕ್ಕೆ ಲೌಕಿಕ ಲೇಖಕರನ್ನು ಉಲ್ಲೇಖಿಸಿದ್ದಾನೆ. ಮುಂದೆ ಆತನು "ಪ್ರವಾದಿಗಳು" ಎಂಬ ಪದವನ್ನು ಕನಿಷ್ಟ ಕ್ರೈಸ್ತೇತರನಾದ ಒಬ್ಬ ಮನುಷ್ಯನನ್ನು ಸೂಚಿಸಲು ಉಪಯೋಗಿಸಿದ್ದಾನೆ (ತೀತ 1:12). ಯೂದನು ಹನೋಕನ ಕೃತಿಯನ್ನು ದೇವಜನರ ಧರ್ಮಶಾಸ್ತ್ರದ ಹಂತದಲ್ಲಿ ತೆಗೆದುಕೊಂಡಿದ್ದಾನೆ ಎಂದು ಯೋಚಿಸುವ ಅಗತ್ಯತೆ ಏನಿಲ್ಲ. ಪ್ರವಾದಿಗಳು ಮತ್ತು ಬರಹಗಳು ತನ್ನ ಕೃತಿಯಲ್ಲಿ ಉಲ್ಲೇಖಿಸಿರುವ ಹೇಳಿಕೆಗಳಾಗಿವೆ.

ಯೂದನು ಉಲ್ಲೇಖಿಸಿದ ಪದಗಳು ನಿಜವಾಗಿಯೂ ಜಲಪ್ರಳಯಕ್ಕೆ ಮುಂಚಿನ ಕಾಲದ ಹನೋಕನಿಂದ ಬರೆಯಲ್ಪಟ್ಟಿವೆ ಅಥವಾ ಹೇಳಲ್ಪಟ್ಟಿವೆ ಎಂದು ಮತ್ತು ಅವು ಹೇಗೋ ದೇವರ ಒದಗಿಸುವಿಕೆಯಿಂದಾಗಿ 1 ಹನೋಕನ ಪುಸ್ತಕದಲ್ಲಿ ನಿಖರವಾಗಿ ಸಂರಕ್ಷಿಸಲ್ಪಟ್ಟಿವೆ ಎಂದು ಒಂದು ಅವಲೋಕನವು ಹೇಳುತ್ತದೆ. ಇದು ಜಲಪ್ರಳಯದುದ್ದಕ್ಕೂ ಮತ್ತು ಇಸ್ರಾಯೇಲ್ಯರು ನಲವತ್ತು ವರ್ಷಗಳ ಕಾಲ ಅರಣ್ಯದಲ್ಲಿ ಸಂಚರಿಸುತ್ತಿರುವಾಗಲೂ, ಇಸ್ರಾಯೇಲ್ಯ ಜನಾಂಗ ಹಾದು ಬಂದ ಸಾವಿರಾರು ವರ್ಷಗಳ ದುರದೃಷ್ಟಕಾಲದಲ್ಲಿಯೂ ಶಾಬ್ದಿಕವಾಗಿ ಅಥವಾ ಬರವಣಿಗೆಯಲ್ಲಿ ಹನೋಕನ ಮಾತುಗಳು ಸಂರಕ್ಷಿಸಲ್ಪಟ್ಟಿವೆ ಎಂದು ಈ ಅವಲೋಕನ ಹೇಳುತ್ತದೆ. ಅವು ಜಲಪ್ರಳಯಕ್ಕಿಂತ ಬಹಳ ಹಿಂದಿನ ದಿನಗಳಲ್ಲಿ ನಡೆದ ಘಟನೆಗಳನ್ನು ವರ್ಣಿಸಿದ್ದಾಗ್ಯೂ, ದೇವರು ನಮಗೆ ಸೃಷ್ಟಿಯ ಕಥೆಯನ್ನು ಪ್ರಕಟಿಸಿದಾಗ ಇಂಥಹದೋ ಸಂಗತಿ ಸಂಭವಿಸಿತು. ಯೂದನು ವಿಷಯದಲ್ಲಿ ಪವಿತ್ರಾತ್ಮನೂ 1 ಹನೋಕನ ಗ್ರಂಥದಿಂದ ಯಾವುದು ನಿಜವಾಗಿದೆಯೋ ಅದನ್ನು ಆಯ್ದುಕೊಳ್ಳಲು ನಿರ್ದೇಶಿಸಿರಬಹುದು. ಹಾಗೂ, ಯಾರ್ಯಾರು ಈ ದೃಷ್ಟಿಕೋನವನ್ನು ತೆಗೆದುಕೊಳ್ಳುತ್ತಾರೋ ಅವರು ಪ್ರಾಚೀನ ಲೇಖಕರು ಯಾರೇ ಆಗಿರಲಿ, ಸತ್ಯವೇದವನ್ನು ಬರೆದವರನ್ನು ಒಳಗೊಂಡು, ಹನೋಕನ ಪುಸ್ತಕದಿಂದ ತೆಗೆದುಕೊಂಡ ಪದಗಳ ಕುರಿತು ಏನನ್ನೂ ತಿಳಿದಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕು. ಮತ್ತು ಅವರು ಹೀಗೆ ಮಾಡಿರುವದಕ್ಕೆ ಕನಿಷ್ಟಪಕ್ಷ ಯಾವ ಸಾಕ್ಷಿಯೂ ಇಲ್ಲ.

ಈ ಹೇಳಿಕೆಗೆ ಸಂಬಂಧಿಸಿದ ಇನ್ನೊಂದು ಅವಲೋಕನವೆಂದರೆ ಯೂದನು ತನ್ನ ವಿಷಯವನ್ನು ಸಮರ್ಥಿಸಿಕೊಳ್ಳಲು ಸುಮ್ಮನೆ ಹನೋಕನನ್ನು ಉಲ್ಲೇಖಿಸಿದ್ದಾನೆ. ಯೂದನು ಸಹಜವಾಗಿ 1 ಹನೋಕನ ಗ್ರಂಥದ ಪರಿಚಯವಿದ್ದವರಿಗೆ ಬರೆದಿದ್ದಾನೆ. ಮತ್ತು ಮೊದಲಿನ ಓದುಗರು ಅದನ್ನು ಆದಾಮನಿಂದ ಏಳನೇ ತಲೆಮಾರಿನ ಹನೋಕನಿಗೆ ಸಲ್ಲಿಸಿದ್ದರ ಕುರಿತು ಪರಿಚಿತರಾಗಿದ್ದರು. ಯೂದನು ಜನಪ್ರಿಯ ಉಪಯೋಗಕ್ಕೆ ತನ್ನನ್ನು ತಾನು ಹೊಂದಾಣಿಕೆ ಮಾಡಿಕೊಂಡಿರಬಹುದು. ಯೂದನು ಮತ್ತು ಆತನ ಓದುಗರು ಆತನು ಸೂಚಿಸಿದ ಕಾರ್ಯವು ಹನೋಕನಿಗೆ ಸಲ್ಲುತ್ತದೆ ಎಂಬುದನ್ನು ಅರಿತುಕೊಂಡಿದ್ದರು. ಯೂದನು ಗ್ರಂಥವನ್ನು ಯಾರು ಬರೆದಿದ್ದಾರೆ ಮತ್ತು ಅದು ಯಾವಾಗ ಬರೆಯಲ್ಪಟ್ಟಿದೆ ಎಂಬುದರ ಕುರಿತು ಆ ಕ್ಷಣದಲ್ಲಿ ಆಸಕ್ತಿವಹಿಸಲಿಲ್ಲ. ಆತನು ಕೇವಲ ತನ್ನ ವಿಷಯವನ್ನು ಸಮರ್ಥಿಸಿಕೊಳ್ಳಲು ಅದರಲ್ಲಿರುವ ಪದಗಳನ್ನು ಎರವಲು ತೆಗೆದುಕೊಳ್ಳಲು ಬಯಸಿದ್ದನು. ನನ್ನ ತೀರ್ಮಾನಕ್ಕೆ ಅನುಸಾರವಾಗಿ ಈ ಅವಲೋಕನ ಹೆಚ್ಚು ಸಂಭವನೀಯವಾಗಿದೆ.

1 ಹನೋಕನಿಂದ ಯೂದನು ನೀಡಿದ ಉದಾಹರಣೆ ಯಾವುದೇ ರೀತಿಯಲ್ಲಿ ಗಾಬರಿಹುಟ್ಟಿಸುವ ನವೀನ ಸಿದ್ಧಾಂತವಲ್ಲ ಮತ್ತು ಕರ್ತನ ತಿರುಗಿಬರಲಿಕ್ಕಿದ್ದಾನೆ ಎಂದು ದೃಢೀಕರಿಸಲ್ಪಟ್ಟ ಸಾಮಾನ್ಯ ಪ್ರವಾದನೆಗಿಂತ ಬೇರೆಯೇನಲ್ಲ. ಸತ್ಯವೇದದಲ್ಲಿ ಇರುವ

ಇನ್ನಿತರ ವಿಷಯಗಳಂತೆ ಯೂದನು ಅದರ ಸನ್ನಿವೇಶದಲ್ಲಿ ತೆಗೆದುಕೊಂಡಿರಬಹುದು. 1 ಹನೋಕನ ಉದಾಹರಣೆಯ ಸನ್ನಿವೇಶ, ಯೂದನು ತಾನು 1 ಹನೋಕನ ಪುಸ್ತಕದಿಂದ ನೀಡಿದ ಉದಾಹರಣೆಯ ಸನ್ನಿವೇಶ ಆದಿಕಾಂಡ 5:21-24ರಲ್ಲಿ ಬರುವ ಹನೋಕನಿಂದ ಹೇಳಲ್ಪಟ್ಟಿವೆ ಅಥವಾ ಬರೆಯಲ್ಪಟ್ಟಿವೆ ಎಂದು ನಂಬುತ್ತೇನೆ ಎಂದು ನಿರ್ಧರಿಸುವದಿಲ್ಲ. ಯೂದನು ನೀಡಿದ ಉದಾಹರಣೆ ಕ್ರಿಸ್ತನಿಗಿಂತ ಪೂರ್ವದಲ್ಲಿ ಮತ್ತು ನಂತರದಲ್ಲಿ ವರ್ಷಗಳಲ್ಲಿ ತಕ್ಷಣ ಉತ್ಪತ್ತಿಯಾಗಿವೆ. 1 ಹನೋಕನಿಂದ ಎರವಲು ಪಡೆದ ಪದಗಳನ್ನು, ಯೂದನು ಕ್ರೈಸ್ತ ಬೋಧನೆಯನ್ನು ಬದಲಾಯಿಸುವ ಸುಳ್ಳು ಬೋಧಕರಿಗೆ ನ್ಯಾಯತೀರಿಸಲು ದೇವರು ಬರುತ್ತಾನೆ ಎಂದು ಹೇಳಲು ಉಪಯೋಗಿಸುತ್ತಾನೆ.

ನಾವು ಕೆಳಗಿನವುಗಳನ್ನು ದೃಢೀಕರಿಸುವದು ಅವಶ್ಯವಾಗಿದೆ. (1) ಹೊಸ ಒಡಂಬಡಿಕೆಯ ಎಲ್ಲಾ ಪುಸ್ತಕಗಳು ದೇವರಿಂದ ಪ್ರೇರಿಪಿತವಾದವುಗಳಾಗಿವೆ. ಆದುದರಿಂದ ಅವೆಲ್ಲವುಗಳು ಕ್ರಿಸ್ತನ ಸಭೆಗೆ ಅಧಿಕಾರಯುತವಾಗಿವೆ. (2) ಯೂದನು ಬರೆದಿರುವದೆಲ್ಲವೂ ದೈವಪ್ರೇರಿತ ವಾದದ್ದು ಆದುದರಿಂದ ಅವು ಸತ್ಯವಾಗಿವೆ. (3) ಕ್ರೈಸ್ತರ ದೈವಿಪ್ರೇರಣೆಯನ್ನು ವಾಕ್ಯಭಾಗವು ತನ್ನನ್ನು ತಾನು ಮಂಡಿಸಿಕೊಳ್ಳುವ ರೀತಿಯಲ್ಲಿಯೇ ತಿಳಿದುಕೊಳ್ಳಬೇಕು. ದೈವೀಪ್ರೇರಣೆ ಎಂದರೆ ಏನು ಎಂಬ ಪೂರ್ವಭಾವಿಯಾಗಿ ಗ್ರಹಿಸಿಕೊಂಡಿರುವ ಅಭಿಪ್ರಾಯದಿಂದಲ್ಲ. (4) ಯೂದನು ಹನೋಕನ ಉದಾಹರಣೆಯನ್ನು ದೈವೀಪ್ರೇರಣೆಯಿಂದ ನೀಡಿದ್ದಾನೆ, ಈ ಮೂಲಕ ಯೂದನ ಮೊದಲ ಓದುಗರು ಮತ್ತು ಇನ್ನಿತರ ಎಲ್ಲಾ ಓದುಗರು ತಿಳಿದುಕೊಳ್ಳಬೇಕೆಂದು ದೇವರು ಬಯಸುತ್ತಾನೆ. (5) ಯೂದನ ವಿಷಯವೇನಂದರೆ ಆತನು ಸಂಬೋಧಿಸಿದ ಸಭೆಗೆ ತೊಂದರೆಯನ್ನು ನೀಡಿದ ಸುಳ್ಳು ಬೋಧಕರು ಮತ್ತು ತೊಡಗಿಸಿಕೊಳ್ಳುವ ಇನ್ನಿತರ ಎಲ್ಲಾ ಸುಳ್ಳುಬೋಧಕರು, ಕ್ರಿಸ್ತನು ತಿರುಗಿ ಬರುವಾಗ ನ್ಯಾಯತೀರ್ಪಿಗಾಗಿ ಕರೆಯಲ್ಪಡುತ್ತಾರೆ.

1 ಹನೋಕನಲ್ಲಿರುವ ಮಾತುಗಳು ಲೌಕಿಕ ರೀತಿಯಲ್ಲಿ ನೈತಿಕವಾದ ಜೀವಿತವನ್ನು ನಡೆಸುವವರ ಮೇಲೆ ಬರುವ ದೇವರ ನ್ಯಾಯತೀರ್ಪಿನ ವಿಷಯದಲ್ಲಿ ಸಂಪೂರ್ಣವಾಗಿ ವ್ಯಕ್ತಪಡಿಸುವದನ್ನು ಮುಂದುವರೆಸುವ ಸರಳವಾದ ಮಾರ್ಗವಾಗಿದೆ ಇಲ್ಲಿ ಉಪಯೋಗಿಸಿಗ ಪದ **ಭಕ್ತಿಹೀನ.** ಇದು NASB ವಚನ 15ರಲ್ಲಿ ನಾಲ್ಕು ಸಾರಿ ಕಂಡುಬರುತ್ತದೆ. ಇದನ್ನು ಕ್ರಿಯಾವಿಶೇಷಣಗಳಾದ *asebeia* ಮತ್ತು asebes ಕ್ರಿಯಾಪದ *asebeō* ಹಿಂದಕ್ಕೆ ನೀಡಲು ಉಪಯೋಗಿಸಲಾಗಿದೆ. ಯೂದನು ತಾನು ಎದುರಿಸಿದ ಸುಳ್ಳುಬೋಧಕರನ್ನು ವರ್ಣಿಸಲು ಇದು ಸರಿಯಾದ ಪದವೆಂದು ತೆಗೆದುಕೊಂಡಿದ್ದಾನೆ. 1 ಹನೋಕ 1:9ರಲ್ಲಿರುವ ನಿಜವಾದ ಪದಗಳು ಹೀಗಿವೆ: "ಅವನು ದುಷ್ಟರನ್ನು ನಾಶಮಾಡುತ್ತಾನೆ ಮತ್ತು ಪಾಪಿಗಳು ಮತ್ತು ದುಷ್ಟರು ತನ್ನ ವಿರುದ್ಧವಾಗಿ ಮಾಡಿದ ಎಲ್ಲಾ ಶಾರೀರಿಕ ಕಾರ್ಯಗಳಿಗಾಗಿ ಖಂಡಿಸುತ್ತಾನೆ." 1 ಹನೋಕನ ಗ್ರಂಥದ ಗ್ರೀಕ್ ಅವತರಣಿಕೆ ಯೂದನ ಪುಸ್ತಕದಲ್ಲಿರುವ ಪದಗಳೊಂದಿಗೆ ನಿಕಟವಾದ ಸಂಬಂಧವನ್ನು ತೋರಿಸುತ್ತದೆ.

ತಾನು ಮತ್ತು ತನ್ನ ಓದುಗರು ಸಂಧಿಸಿದ ಬೋಧಕರ ಕುರಿತಾಗಿ ನಿಜವಾಗಿಯೂ ಹನೋಕನು ಬರೆಯುತ್ತಿದ್ದಾನೆ ಎಂದು ಯೂದನು ಹೇಳುವದಿಲ್ಲ. ಬದಲಾಗಿ ಆತನು ಉದಾಹರಣೆಯನ್ನು ನೀಡಿರುವ 1 ಹನೋಕನ ಗ್ರಂಥದಲ್ಲಿ "ಭಕ್ತಿಹೀನರ" ಕುರಿತಾಗಿ ಬರೆದಿರುವ ಪದಗಳು ಅವನು ಬರೆದಿರುವ ವ್ಯಕ್ತಿಗಳಿಗೂ ಅನ್ವಯಿಸುತ್ತದೆ ಎಂದು ಹೇಳುತ್ತಾನೆ. ಸುಳ್ಳು ಪ್ರವಾದಿಗಳ ಅಹಂಕಾರ ಚರ್ಚೆಯಲ್ಲಿರುವ ವಿಷಯವಾಗಿ ಮುಂದುವರೆದಿದೆ. ಅವರು ದೇವರ ವಿರೋಧವಾಗಿ ಕಠಿಣವಾದ ಮಾತುಗಳನ್ನು **ಆಡುತ್ತಾರೆ** ಅದು ಅವರನ್ನು **ಭಕ್ತಿಹೀನ ಪಾಪಗಳನ್ನಾಗಿಸುತ್ತದೆ.** ಅದೇ ರೀತಿಯಲ್ಲಿ, ಅವರು **ನ್ಯಾಯತೀರ್ಪನ್ನು** ಎದುರಿಸುತ್ತಾರೆ, ಅದು, ದೇವರ ದಂಡನೆಯಾಗಿದೆ.

**ವಚನ 16.** ಸುಳ್ಳು ಬೋಧಕರು ಕನಿಷ್ಟಪಕ್ಷ ಮೂರು ವಿಧದಲ್ಲಿ ಜನರನ್ನು ಮೋಸ

ಗೋಳಿಸುತ್ತಾರೆ. ಮೊದಲನೆಯದಾಗಿ, ಅವರು ಅಪೊಸ್ತಲರ ಸಂದೇಶವನ್ನು ಹೇಳುವವರನ್ನು ಗೌರವಿಸುವದಿಲ್ಲ. ಅವರು ಗುಣಗುಟ್ಟುವವರು, ತಪ್ಪು ಹುಡುಕುವವರು ಆಗಿದ್ದಾರೆ. ರಚನಾತ್ಮಕ ವಿಮರ್ಶೆ ಮತ್ತು ಗುಣಗುಟ್ಟುವದು ಸಂಪೂರ್ಣವಾಗಿ ಎರಡು ವಿಭಿನ್ನ ಸ್ಥಳಗಳಾಗಿವೆ. ಸುಳ್ಳುಬೋಧಕರಿಗೆ ಕ್ರೈಸ್ತರನ್ನು ಪಾಪಮಯ ಜೀವಿತದಲ್ಲಿ ಸ್ವಯಂ-ತೃಪ್ತಿಪಟ್ಟುಕೊಳ್ಳುವದರಿಂದ ಬದಲಾಯಿಸಲು ಆಸಕ್ತಿಯಿರುವದಿಲ್ಲ. ಅವರಿಗೆ ಕ್ರಿಸ್ತನ ದೇಹವನ್ನು ಕಟ್ಟುವ ಗುರಿಯಿರುವದಿಲ್ಲ. **ಗೊಣಗುಟ್ಟುವದು ಒಂದು ರೀತಿಯ ಮನಸ್ಥಿತಿಯನ್ನು ಅನುಸರಿಸುತ್ತದೆ.** ತಪ್ಪುಹುಡುಕುವದು, ಆಕ್ಷೇಪಿಸುವ ಮನೋವೃತ್ತಿ ಯಾವುದರಿಂದಲೂ ಸಂತೃಪ್ತಿಯನ್ನು ಹೋಂದುವದಿಲ್ಲ. ತಮ್ಮ ಸ್ವಂತ ದುರಾಶೆಗಳನ್ನು ಅನುಸರಿಸುವದರ ಹೊರತು ಅವರಿಗೆ ಬೇರೆ ಯಾವ ಪ್ರೇರಪಣೆಯಿರುವದಿಲ್ಲ. ಸದಸ್ಯರಲ್ಲಿ ಸಮಸ್ಯೆಯನ್ನು ಪರಿಹರಿಸುವದರಲ್ಲಿ ಮತ್ತು ಸೇವೆ ಮಾಡುವದರಲ್ಲಿ **ತಮ್ಮ ಸ್ವಂತ ಪ್ರಯತ್ನವನ್ನು ಸ್ವಲ್ಪಮಟ್ಟಿಗೆ ಉಪಯೋಗಿಸುವ,** ಮತ್ತು ಸೇವೆ ಮಾಡುವದರ ಕುರಿತು ಹೇರಳವಾದ ವಿಮರ್ಶೆಯನ್ನು ಮಾಡುವ ಇಂತಹ ಜನರು ಸಭೆಯಲ್ಲಿರುವಾಗ ಸಭೆಯು ಪಿಡುಗಿಗೆ ಒಳಗಾಗುತ್ತದೆ.

ಎರಡನೆಯದಾಗಿ, ಯೂದನು ಸುಳ್ಳು ಬೋಧಕರು ಇತರರನ್ನು ಮೋಸಮಾಡುತ್ತಾರೆ ಮತ್ತು ಅವರು **ಅಹಂಕಾರದಿಂದ** [ಮಾತನಾಡು]ವದರಿಂದಾಗಿ ಈ ಕೆಳಗಿನವುಗಳನ್ನು ಹೊಂದಿಕೊಂಡಿದ್ದಾರೆ. ಅಹಂಕಾರಿಗಳು ತಮ್ಮನ್ನು ತಾವು ಶ್ರೇಷ್ಟರು ಎಂದುಕೊಳ್ಳುತ್ತಾರೆ. ಅವರಲ್ಲಿ ಪ್ರತಿಯೊಂದು ಸಮಸ್ಯೆಗೆ ಉತ್ತರವಿರುತ್ತದೆ. ಒಬ್ಬನು ತನ್ನನ್ನು ತಾನು ಮಾರ್ಮಿಕವಾಗಿ ಹೊಗಳಿಕೊಳ್ಳುತ್ತಾನೆ ಅಥವಾ ಅಷ್ಟೊಂದು ಮಾರ್ಮಿಕವಲ್ಲದ ವಿಧದಲ್ಲಿ ಹೊಗಳಿಕೊಳ್ಳುತ್ತಾನೆ. ಅಹಂಕಾರಿಗಳಿಗೆ ಇತರರನ್ನು ಆಲಿಸಲು ಮತ್ತು ಕಲಿಯಲು ಸ್ವಲ್ಪ ಸಮಯವಿರುತ್ತದೆ, ಅದರಲ್ಲಿ ಕರ್ತನ ಸಹೋದರರಾದ ಯಾಕೋಬ ಮತ್ತು ಯೂದನಂತ ಜನರು ಸೇರಿದಾಗಲೂ ಸಹ. ಕ್ರೈಸ್ತರಿಗೆ ಕರುಣೆ ಮತ್ತು ಮರ್ಯಾದೆ ಎಂಬ ಮೌಲ್ಯಗಳ ಮಹತ್ವವನ್ನು ಬೋಧಿಸಲಾಗಿರುತ್ತದೆ. ಸುಳ್ಳು ಪ್ರವಾದಿಗಳು ಕೆಲವೊಮ್ಮೆ ಕ್ರೈಸ್ತರು ತಮ್ಮನ್ನು ತಾವು ಮುಂದಿನ ಸ್ಥಾನದಲ್ಲಿ ಇಟ್ಟುಕೊಳ್ಳಲು ಪ್ರೀತಿಯಿಂದ ಗಟ್ಟಿಯಾಗಿ ಹಿಡಿದುಕೊಂಡಿರುವ ಈ ಮೌಲ್ಯಗಳ ಮೇಲೆ ಆಕ್ರಮಣಮಾಡುತ್ತಾರೆ. ಮಂತ್ರವಾದಿಯಾದ ಸಿಮೋನನಂತೆ, ಯೂದನ ಪುಸ್ತಕದಲ್ಲಿರುವ ಸುಳ್ಳು ಬೋಧಕರು, “ತಮ್ಮನ್ನು ತಾವು ಮಹಾತ್ಮರೆಂದು ಹೇಳಿ ಕೊಳ್ಳುತ್ತಾರೆ” (ಅಪೊಸ್ತಲರ ಕೃತ್ಯಗಳು 8:9). ಈ ರೀತಿಯಲ್ಲಿ ಅವರು ತಾವು ಹೇಳಿದ್ದನ್ನು ಟೀಕಿಸದೆ ಅಥವಾ ತೀರ್ಪನ್ನು ನೀಡದೆ ಸ್ವೀಕರಿಸುತ್ತಾರೋ ಅವರ ಮೇಲೆ ಪ್ರಭಾವವನ್ನು ಬೀರುತ್ತಾರೆ.

ಮೂರನೆಯದಾಗಿ, ಸುಳ್ಳು ಬೋಧಕರು ಯೂದನು ಸಂಬೋಧಿಸಿದ **ಕ್ರೈಸ್ತ ಸಮುದಾಯದ ಸುರಕ್ಷಿತ ಸ್ಥಾನದಲ್ಲಿ ಸ್ವಪ್ರಯೋಜನಕ್ಕಾಗಿ ಮುಖ ಸ್ತುತಿಮಾಡುತ್ತಾರೆ.** ಯೂದನು ತನ್ನ ಓದುಗರು ಸುಳ್ಳು ಬೋಧಕರಿಂದ ತಾವು ಹೊಂದಿಕೊಳ್ಳುವ ಮುಖಸ್ತುತಿಗೆ ಅಷ್ಟೊಂದು ಗಮನವನ್ನು ನೀಡಬಾರದೆಂದು ಸಲಹೆನೀಡುತ್ತಿದ್ದಾನೆ. ಬದಲಾಗಿ ಅವರು ಬೋಧಿಸುತ್ತಿರುವ ಸಂಗತಿಗಳನ್ನು ಎಚ್ಚರಿಕೆಯಿಂದ ಗಮನಿಸಬೇಕೆಂದು ಸಲಹೆಯನ್ನು ನೀಡುತ್ತಿದ್ದಾನೆ.

## ಅಳವಡಿಸಿಕೊಳ್ಳುವದು

### ಅನುಕೂಲತೆಗಳು ಸದ್ಗುಣವಾಗಿಲ್ಲದೇ ಇರುವಾಗ (ವಚನಗಳು 10-16)

ನಾನು ಮತ್ತು ನನ್ನ ಹೆಂಡತಿ ಆಸ್ಟ್ರಿಯಾದ ಗ್ರ್ಯಾಟ್‌ನಲ್ಲಿ ಕಾಲೇಜು ವಿದ್ಯಾರ್ಥಿಗಳ ಗುಂಪಿನ ಬಾಗಿಲನ್ನು ತಟ್ಟುವ ಅಭಿಯಾನದಲ್ಲಿದ್ದೆವು. ಯೌವನಸ್ಥರಿಗೆ ಕಠಿಣ ಪ್ರಯಾಣದ ನಂತರ ಒಟ್ಟಾಗಿ ಸೇರಿಬಂದು ಜೊತೆಗಾರರೊಂದಿಗೆ ಇರುವದಕ್ಕೆ ಸಭೆಯು ಸುಖವಾದ ಕೋಣೆಯನ್ನು

ನೀಡಿತ್ತು. ಒಂದು ದಿನ ಮಧ್ಯಾಹ್ನ ಬಹಳ ತಡವಾಗಿ, ನಾವು ಹಿಂದಿರುಗಿ ಬಂದಾಗ ನಮ್ಮ ಜೊತೆಗಾರರ ಕೊಠಡಿ ನಮ್ಮ ವಿದ್ಯಾರ್ಥಿಗಳು ಮತ್ತು ಒಂದು ಡಜನ್ ಅಪರಿಚಿತರೊಂದಿಗೆ ತುಂಬಿತ್ತು. ವಿದ್ಯಾರ್ಥಿಗಳು ನಮ್ಮನ್ನು ತಮ್ಮ ಅತಿಥಿಗಳಿಗೆ ಪರಿಚಯಿಸಿದರು. ಅವರು ಸುಂದರವಾದ ಯೌವನಸ್ಥರಾಗಿದ್ದರು ಮತ್ತು ಸುಮಾರು ಮೂವತ್ತೈದು ವರ್ಷ ಪ್ರಾಯದ ಸಭ್ಯ ನಾಯಕನನ್ನು ಹೊಂದಿದ್ದರು.

ನಮ್ಮ ಯೌವನಸ್ಥರಿಗೆ ಈ ಯೌವನಸ್ಥ ಬೋಧಕರೊಂದಿಗೆ ಸ್ವಲ್ಪ ಮಾತ್ರ ಅನುಭವವಿತ್ತು. ಅವರು ತಮ್ಮ ಅತಿಥಿಗಳು ಯೇಸುವಿನಲ್ಲಿರುವ ತಮ್ಮ ನಂಬಿಕೆಯನ್ನು ನಮ್ಮೊಂದಿಗೆ ಹಂಚಿಕೊಳ್ಳಲು ಅವರು ಬಂದಿದ್ದಾರೆ ಎಂದು ಭಾವಿಸಿದರು. ಅವರು ತಾವು ಮನೆಯನ್ನು ಬಿಡುವ ಸಂದರ್ಭದಲ್ಲಿ ಮಿಶನರಿಗಳು ತಮ್ಮಿಂದ ತೆಗೆದುಕೊಂಡ ಪ್ರಮಾಣವನ್ನು ತಿಳಿದವರಾಗಿರಲಿಲ್ಲ. ಅವರು ಕಲಿಯುವದಕ್ಕಾಗಲಿ ನಮ್ಮ ಯೌವನಸ್ಥರೊಂದಿಗೆ ಸಂಭಾಷಣೆ ಮಾಡುವದಕ್ಕಾಗಲಿ ಬಂದಿರಲಿಲ್ಲ. ಅವರು ಒಳಮಾರ್ಗಗಳನ್ನು ಮಾಡಲು ಮತ್ತು ಸೋಸಿ ತೆಗೆಯಲು ಬಂದಿದ್ದರು. ನನಗೆ ಮತ್ತು ನನ್ನ ಹೆಂಡತಿಗೆ ಸನ್ನಿವೇಶವನ್ನು ನಿರ್ವಹಿಸಲು ಕಷ್ಟವಾಯಿತು. ನಾವು ಅತಿಥಿಗಳಿಗೆ ಬಲವಾಗಿ ಪ್ರಶ್ನಿಸಿದ್ದಲ್ಲಿ, ನಮ್ಮ ಯೌವನಸ್ಥರು ನಾವು ಅವರ ಸ್ನೇಹಿತರನ್ನು ಕಳುಹಿಸಿಬಿಡುತ್ತೇವೆ ಎಂದು ಕೊಳ್ಳುತ್ತಿದ್ದರು. ಯೌವನಸ್ಥ ಮತ್ತು ಅನುಭವವಿಲ್ಲದವರು ಸುಳ್ಳು ಬೋಧಕರ ನಿಜವಾದ ಬಣ್ಣವನ್ನು ತಿಳಿದುಕೊಳ್ಳುವದು ಬಹಳ ಕಠಿಣವಾಗುತ್ತದೆ.

ಯೂದನು ಸಹ ಇಂಥಹದ್ದೇ ಸನ್ನಿವೇಶವನ್ನು ಎದುರಿಸಿರಬಹುದು. ಅನೇಕ ಓದುಗರು ಯೌವನಸ್ಥ ಕ್ರೈಸ್ತರಾಗಿದ್ದರು. ಅವರು ಪ್ರಭುದ್ಧತೆಯ ಮತ್ತು ತಮ್ಮ ಸೋಸಿತೆಗೆಯಲು ಬಯಸುವವರ ಒಳಮಾರ್ಗಗಳನ್ನು ತಿಳಿದುಕೊಳ್ಳಲು ಅನುಭವದ ಕೊರತೆಯುಳ್ಳವರಾ ಗಿದ್ದರು. ಯೂದನು ಸುಳ್ಳುಬೋಧಕರ ಕುರಿತು ತನ್ನ ನಿಂದನೆಯಲ್ಲಿ ಮಾರ್ಮಿಕವಾಗಿರಲಿಲ್ಲ. ಪದಗಳು ನಮಗೆ ಕಠಿಣವಾಗಿ ತೋರಬಹುದು. ಕರ್ತನ ಸಹೋದರನಿಗೆ ಜೋಡಿಸಿಕೊಂಡು ಹೋಗುವದಲ್ಲ, ಸುತ್ತಿಗೆಯನ್ನು ಉಪಯೋಗಿಸುವ ಸಮಯ ಇದಾಗಿತ್ತು. ಅವನು ಸರಳವಾ ಗಿರಬೇಕಾಗಿತ್ತು. ಸಾತ್ವಿಕರಾಗಿರಬೇಕಾದ ಸಮಯವೂ ಇದೇ ಎಂದು ಪರಿಗಣಿಸೋಣ. ಎಲ್ಲಾ ಸಮಯದಲ್ಲಿ ಸತ್ಯವನ್ನು ಪ್ರೀತಿಯಿಂದ ಹೇಳಬೇಕು (ಎಫೆಸ 4:15). ಇದೆಲ್ಲವೂ ಸತ್ಯ, ಆದರೆ ಒಂದು ಸಮಯ ಬರುತ್ತದೆ ಆಗ ಕ್ರೈಸ್ತರು ಕ್ರಿಸ್ತನ ಸಿದ್ಧಾಂತಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾರೋ ಅವರಿಂದ ಬೇರ್ಪಡುವ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಎಚ್ಚರಿಕೆ ಮತ್ತು ಪ್ರಬೋಧನೆಯನ್ನು ನೀಡಿದ ನಂತರ ಕ್ರೈಸ್ತರು ಭಕ್ತಿಹೀನ ವರ್ತನೆಯನ್ನು ಅನಿಶ್ಚಿತಕಾಲದವರೆಗೆ ಸಹಿಸಿಕೊಳ್ಳಲಾಗುವದಿಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕು.

---

ಟಿಪ್ಪಣೆಗಳು

[1]E. Earle Ellis, *Prophecy and Hermeneutic in Early Christianity* (Grand Rapids, Mich.: Baker Books, 1993), 220-26. [2]An English translation of 1 Enoch along with an introduction and brief comments can be found in James H. Charlesworth, ed., *The Old Testament Pseudepigrapha* (New York: Doubleday, 1983), 1:5-89, First Enoch 6-19 has the sons of God in Gensis 6 as its subject matter. [3]Richard J. Bauckham, J*ude, 2 Peter,* Word Biblical Commentary*,* vol. 50 (Waco, Tex.: Word Books, 1983), 53. [4]Wisdom of Solomon 10:7 (NRSV). [5]Victor P. Hamilton observed, "The location of Sodom is uncertain." He added, "No indubitable archeological evidence had yet emerged to substantiate either a northern or a southern location." (Victor P. Hamilton, *The Book of Genesis: Chapters 18-50,* The New International Commentary on the Old

Testament [Grand Rapids, Mich.: Wm. B. Eerdmans Publishing Co., 1995], 31.) [6]This is the viewpoint of J. N. D. Kelly, *A Commentary on the Epistles of Peter and of Jude,* Black's New Testament Commentaries (London: Adam & Charles Black, 1969), 258. [7]Ibid., 261. [8]Tobit 5:4; 6:11; 7:9; 8:2; 9:5; 11:1; 12:6. [9]An English translation of the Testament of Moses can be found in Charlesworth, 1:919-34. [10]The technical term for such a grammatical move is "anacolution."

[11]The translation of 1 Enoch 1:9 is from Charlesworth, 1:13-14. [12]1 Enoch 60:8.